ಕೊರವಂಜಿ

Koravanji



ಏಪ್ರಿಲ್
೧೯೫೪

★

ಸಂಪಾದಕರು :
ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಪ್ರಸಾದ್
ಶ್ರೀ॥ ಕವಿಮರಿ
ಶ್ರೀ॥ ನಾ. ಕ.
ಶ್ರೀಮತಿ ರುದ್ರಮ್ಮ
ಶ್ರೀ॥ ಚೆನ್ನಸ್ವಾಮಿ
ಶ್ರೀ॥ ಕಾಮತ್
ಶ್ರೀ॥ ರೇವಣ್ಣ
ಶ್ರೀ॥ ದಿಬ್ಬಯ್ಯ
ಶ್ರೀ॥ ಅ. ರಾ. ಸೇ.
ಶ್ರೀಮತಿ ರುದ್ರಮ್ಮ
ಶ್ರೀ॥ ಪಾಟಾಳಿ
ಶ್ರೀ॥ ದಾಶರಥಿ ದೀಕ್ಷಿತ್
ಶ್ರೀ॥ "ಕೇಫ"
ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ

ತಿಳಿನಗೆಯ ಮಾಸಪತ್ರಿಕೆ



ಮಾನವರಿಗೆ ಪ್ರಾಣಕ್ಕಿಂತಲೂ ನೀತಿಯೇ ಪ್ರಧಾನ
ಈ ಪರಮ ಸತ್ಯದ ನಿರೂಪಣೆಯೇ ಈ ಚಿತ್ರಕ್ಕೆ
ಪ್ರಧಾನ ಲಕ್ಷ್ಯ.

TALLAM
RELEASE...

ಬೆಂಗಳೂರು:

ಸಾಗರ್ — ರೂಪಮಹಲ್

★

ಮೈಸೂರು:	ದಾವಣಗೆರೆ:	ಚಿತ್ರದುರ್ಗ:
ಪ್ರಭಾ ಪಿಕ್ಚರ್ ಹೌಸ್	**ಮೋತಿ**	**ರೂಪವಾಣಿ**

ಚಿತ್ರಮಂದಿರಗಳಲ್ಲಿ ಏಕಕಾಲದಲ್ಲಿ ಪ್ರದರ್ಶನ.

ಶೀಘ್ರದಲ್ಲಿಯೇ ಪ್ರದರ್ಶನಾರಂಭ!

ಪರಿಮಳಂರವರ—

ಸ್ವರ್ಗ ವಾಸಲ್

[ತಮಿಳು]



ಅಂಜಲಿ — ಕೆ. ಆರ್. ರಾಮಸ್ವಾಮಿ — ಪದ್ಮಿನಿ

ರಾಜೇಂದ್ರ್ — ಆರ್. ಬಾಲಸುಬ್ರಮಣ್ಯಂ.

ಕತೆ ಮತ್ತು ಸಂಭಾಷಣೆ:— ಅಣ್ಣಾ ದೊರೆ

★

ನಿರೀಕ್ಷಿಸಿ:— ಪ್ರಜಾ ರಾಜ್ಯಂ [ತೆಲುಗು]

CONTACT :

RAGHAVENDRA PICTURES

GANDHINAGAR, BANGALORE 2

ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ ಪ್ರದರ್ಶನವನ್ನು

ನಿರೀಕ್ಷಿಸಿ



ಮಾಡರ್ನ್ ಥಿಯೇಟರ್ಸ್‌ರವರ :—

ಇಲ್ಲರ ಜ್ಯೋತಿ

—(ತಮಿಳು)—

ಡೈರೆಕ್ಟರ್ :— ಟಿ. ಆರ್. ಸುಂದರಂ

ತಾರಾಗಣ :—

ಪದ್ಮಿನಿ — ಶಿವಾಜಿ ಗಣೇಶನ್ — ಶ್ರೀರಂಜಿನಿ (Jr.)
ತಂಗವೇಲು.

Contact for Pictures :

Raghavendra Pictures

GANDHINAGAR, BANGALORE 2

ಜನವರಿ, ಫೆಬ್ರುವರಿ ಮತ್ತು ಮಾರ್ಚಿ ತಿಂಗಳುಗಳಲ್ಲಿ ಬಿಡುಗಡೆಯಾದ ಅತ್ಯುತ್ತಮ ಚಿತ್ರಗಳು

ವಿಜಯಾರವರ---

ಚಂದ್ರಹಾರಂ (ತೆಲುಗು ಮತ್ತು ತಮಿಳು)

ಎನ್. ಟಿ. ರಾಮರಾವ್ – ಶ್ರೀರಂಜಿನಿ – ಸಾವಿತ್ರಿ – ರಂಗರಾವ್ ಮುಂತಾದವರು.

ಕೆಂಪರಾಜರವರ—

ಜಲದುರ್ಗ

— (ಕನ್ನಡ) —

ಕೆಂಪರಾಜ್ – ಕೃಷ್ಣಕುಮಾರಿ – ಗಣಪತಿಭಟ್ಟ – ಮುಂತಾದವರು.

ಮನೋಹರ್ ಪಿಕ್ಚರ್ಸ್‌ರವರ—

ಮನೋಹರ

ಶಿವಾಜಿ ಗಣೇಶನ್ – ಕನ್ನಾಂಬ – ಗಿರಿಜ – ಮುಂತಾದವರು.

ಭರಣಿಯವರ ಹಾಸ್ಯಮಯ ಚಿತ್ರ---

ಚಕ್ರಪಾಣಿ

(ತೆಲುಗು)

ಭಾನುಮತಿ — ನಾಗೇಶ್ವರರಾವ್

★

For Particulars—

VIJAYA TALKIE DISTRIBUTORS

KEMPEGOWDA ROAD, : : BANGALORE 2.

ಕೊರವಂಜಿ

ಸಂಪುಟ ೧೪ | ಏಪ್ರಿಲ್ ೧೯೫೪ | ಸಂಚಿಕೆ ೧

ಯುಗಾದಿಯ ಶುಭಾಶಯಗಳು

ಬಡ್ಜೆಟ್ ಅಧಿವೇಶನ ಹೊತ್ತಿಗೆ, ತೆರಿಗೆಗಳು ಹೊರೆ ಹೊರೆಯಾಗಿ ತಲೆದೋರುತ್ತಿರುವಾಗ, ಕೊರವಂಜಿಯು ಹುಟ್ಟಿದ ಹಬ್ಬವನ್ನು ಆಚರಿಸುವುದಾದರೂ ಹೇಗೆ? ಹೋಟಲಿಗೆ ಹೋಗಿ ಬಾಯಿ ಸಿಹಿ ಮಾಡಿಕೊಳ್ಳೋಣ ಅಂದರೆ ಅಲ್ಲೂ ತೆರಿಗೆ, ಕಾಫಿ ಕುಡಿಯೋಣ ಅಂದರೆ ಅದಕ್ಕೂ ತೆರಿಗೆ, ಬೀಡಾ ಜಗಿಯೋಣ ಅಂದರೆ ಅಡಿಕೆಗೆ ಸುಂಕ. ಹೀಗಾಗಿ ಮನಸ್ಸಿನಲ್ಲೇ ಹಬ್ಬ ಮಾಡೋದು ಕ್ಷೇಮ. ಮನಸ್ಸಿನ ಯೋಚನೆಗಳಿಗೆ ಇನ್ನೂ ತೆರಿಗೆ ಹಾಕುತ್ತಿಲ್ಲ. ಪ್ರಾಯಶಃ ಆರ್ಥಿಕ ಮಂತ್ರಿಗಳಿಗೆ ಅನ್ನಿಸಿರಬಹುದು; ಆ ರೀತಿ ಹಾಕಿದರೆ ಹೆಚ್ಚು ಜನಕ್ಕೆ ಅನ್ವಯಿಸುವುದಿಲ್ಲ. ಹೆಚ್ಚು ಹಣ ಬರುವುದಿಲ್ಲ ಎಂದು.

ಆದುದರಿಂದ ಕೊರವಂಜಿಯು ಮನಸ್ಸಿನಲ್ಲೇ ಮಂಡಿಗೆ ತಿಂದು ಓದುಗರೆಲ್ಲರಿಗೂ, ಕೊಂಡು ಓದುವವರಿಗೆ ಖಂಡಿತವಾಗಿಯೂ, ಜೀವನ ಹಿತವಾಗಲೆಂದೂ, ಪ್ರೋತ್ಸಾಹಿಸುವ ಜಾಹೀರಾತುದಾರರಿಗೆ ಯಶಸ್ವೀ ಲಾಭವಾಗಲೆಂದೂ, ಲೇಖಕ, ಚಿತ್ರಕ ವರ್ಗದವರಿಗೆ ಒಳ್ಳೆಯದಾಗಲೆಂದೂ ಮನಸಾ ಹಾರೈಸುತ್ತಾಳೆ.

★

ಕುಹಕಿಡಿಗಳು

ವಿಧಾನ ಪರಿಷತ್ತಿನ ಸದಸ್ಯರ ಕ್ಷೇಮಚಿಂತನೆಗಾಗಿ ವೈದ್ಯರೊಬ್ಬರನ್ನು ಪ್ರತ್ಯೇಕ ವಾಗಿ ಗೊತ್ತುಮಾಡಿದ್ದಾರಂತೆ—

—ವೈದ್ಯರು ಮಾನಸಿಕ ವೈದ್ಯರೋ ಅಲ್ಲವೋ ಇನ್ನೂ ತಿಳಿದುಬಂದಿಲ್ಲ.

* * *

ತೋಳಸಾಕಿದ ಹುಡುಗ ಈಗ ಮನುಷ್ಯನಂತೆಯೇ ಕಾಣಿಸುತ್ತಿದ್ದಾನೆ.

—ಅಂದಮೇಲೆ ಓದಿ ವೈದ್ಯನಾದರೆ ಅಥವಾ ರಾಜಕಾರಣಿಯಾದರೆ, ಚೆನ್ನಾಗಿ ಬಾಳ್ವೆನಡೆಸಿಕೊಳ್ಳಬಹುದು!

* * *

ಪಕ್ಕಪಕ್ಕದ ಸುದ್ದಿಗಳು—ಪತ್ರಿಕೆಗಳಲ್ಲಿ—

— ಭಾರತದ ಉತ್ತರದಲ್ಲಿ ಸುತ್ತಲಿರುವ ಪಾಕೀಸ್ಥಾನಕ್ಕೆ ಅಮೇರಿಕನ್ ಮಿಲಿಟರಿ ಸಹಾಯ—

—ಭಾರತದಲ್ಲಿರುವ ಫ್ರೆಂಚ್ ನಿಲ್ದಾಣದಲ್ಲಿ ಮಿಲಿಟರಿ ಬಂದೋಬಸ್ತು—

—ಭಾರತದಲ್ಲಿರುವ ಪೋರ್ಚುಗೀಸರ ನಿಲ್ದಾಣಗಳಲ್ಲಿ ಮಿಲಿಟರಿ ಕಾರ್ಯಕ್ರಮ

—ಅಂದಮೇಲೆ ಭಾರತದಲ್ಲಿ "ಷೇರು" ಬೆಲೆ ಹೆಚ್ಚಾಗಬಹುದು!!

* * *

ಪೂರ್ವಪಾಕಿಸ್ಥಾನದಲ್ಲಿ ಬಂಗಾಳಿಯೇ ಮುಖ್ಯ ಭಾಷೆಯಾಗಬೇಕೆಂದು ಜನಾಬ್ ಫಜಲುಲ್ ಹಕ್‌ರವರನ್ನು ನಾಯಕರಾಗಿ ಆಯ್ಕೆ ಮಾಡಿದ್ದಾರಂತೆ.

—ಅದಕ್ಕೋಸ್ಕರ ಆತ ಈಗ ಬಂಗಾಳಿಯನ್ನು ಕಲಿಯುತ್ತಾರೆಂಬುದು ಶುದ್ಧ ಕುಹಕವಂತೆ—

* * *

ಈಸಾರಿ ನಮ್ಮೂರಿನ ಬಡ್ಜೆಟ್ ಅಧಿವೇಶನದಲ್ಲಿ ಬಹುಮಂದಿ ಪ್ರತಿನಿಧಿಗಳು ಒಮ್ಮತದಿಂದ ಹೇಳಿದರಂತೆ

— ಇಂತಹಾ ಸೌಕರ್ಯಗಳನ್ನು ಇಷ್ಟಿಷ್ಟು ಕೊಡಿ

ಹೊಸ ತೆರಿಗೆಗಳನ್ನು ಹಾಕಲೇಬೇಡಿ.

—ನಾವೂ ಒಪ್ಪುತ್ತೇವೆ, ಈ ಆಶಯವನ್ನು! ರೂಪಾಯಿ ಮಳೆಬಿದ್ದರೆ!!

* * *

ಉರಿಗಾಳು

ಇತರ ಹೆಂಗಸರಿಗಿಂತ, ಸದಾ ಕಿಲಕಿಲ ಹರಟುವ ಹೆಂಗಸರನ್ನೇ, ಈಗಿನ ವಿದ್ಯಾವಂತ ವರರು ಹೆಚ್ಚು ಬಯಸುತ್ತಾರೆ. (ಲೇಖನ) "ಇತರ" ಯಾರಾದರೂ ಉಂಟೇನು?

* * *

ಗಂಡಸರ ಷರ್ಟುಗಳಿಗೇಕೆ ತೋಳು ಉದ್ದವಾಗಿ ಹೊಲೆಯುತ್ತೀ, ಎಂದು ದರ್ಜಿಯೊಬ್ಬನನ್ನು ಕೇಳಿದಾಗ, ಆತ ಹೇಳಿದನಂತೆ, "ಇಲ್ಲದಿದ್ದರೆ, ಅವರು ಹೆಂಗಸರ ಹಾಗೆ ಕಾಣುತ್ತಾರೆ."

* * *

ಇಂಡಿಯಾ ದೇಶವೆಲ್ಲ ತಿರುಗಿಬರುವಂತೆ ಪ್ರತಿಯೊಬ್ಬ ಎಂ. ಪೀ. ಗೂ ರೈಲ್ವೆ ಪಾಸುಗಳನ್ನು ಕೊಡುತ್ತಾರಂತೆ.... ಈ ಸುದ್ದಿ ಕೇಳಿ, ಆ ಎಂ. ಪೀ ಗಳ ಸ್ವಸ್ಥಳದವರಿಗೆ ತುಂಬಾ ಸಮಾಧಾನವಾಗಿದೆಯಂತೆ.

* * *

ಇನ್ನು ಒಂದು ವಾರದವರೆಗೂ ಮಂತ್ರಿಗಳು ಯಾರನ್ನೂ ನೋಡುವಂತಿಲ್ಲ ಎಂಬ ಉತ್ತರಬಂದಾಗ, ಪತ್ರಿಕಾ ಬಾತ್ಮೀದಾರರೊಬ್ಬರು, "ಪಾಪ! ಅವರ ಕಣ್ಣು ನೋವು ಬೇಗ ವಾಸಿಯಾಗಲಿ" ಎಂದು ಹರಿಸಿದರಂತೆ.

* *

ವಸ್ತುಪ್ರದರ್ಶನದಲ್ಲಿ ವಸ್ತುಗಳ ಕಡೆ ಪ್ರೇಕ್ಷಕರ ಗಮನ ಹೋಗದಿರಲು ಮನರಂಜನೆ ಸತತವಾಗಿ ನಡೆಯುತ್ತದೆ (ವರದಿ) ಮನರಂಜನೆಕಡೆ ಪ್ರೇಕ್ಷಕರ ಗಮನ ಹೋಗದಿರಲು ಹಲವಾರು ಆಕರ್ಷಣೀಯ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸಿದಾರೆ ಎಂಬುದು ಮತ್ತೊಂದುವರದಿ.

* * *

"ಮಂತ್ರಿಗಳಿಂದ ಬಡ್ಜೆಟ್ ಮಂಡನ" (ಶಿರೋನಾಮೆ) ಮುಂಡೆಗೂ ಈ ಕೆಲಸಕ್ಕೂ ಸಂಬಂಧವಿರಬೇಕಲ್ಲವೆ?

* * *

ಸತ್ತಮೇಲೆ ನಮಗೆ ಸ್ವರ್ಗ ದೊರೆಯಲೇಬೇಕು ಎಂದು ಒಬ್ಬ ವಿದ್ಯಾರ್ಥಿ ವಾದಿಸಿದಾಗ, ಉಪಾಧ್ಯಾಯರು, "ಹಾಗಲ್ಲ! ಹಲವರಿಗೆ ಸಿಗಬಹುದು, ಹಲವರಿಗೆ ಸಿಗದಿರಬಹುದು" ಎಂದರಂತೆ. ಆಗ ವಿಧ್ಯಾರ್ಥಿ, "ಹಾಗಾದರೆ ಸತ್ತೇನು ಪ್ರಯೋಜನ?" ಎಂದು ಉದ್ಗಾರ ತೆಗೆದನಂತೆ.

* * *

ಮೊನ್ನೆ ನಗರದಲ್ಲಿ ನಡೆದ ಮದುವೆ ಒಂದಕ್ಕೆ ಹೋಗಿದ್ದವರೊಬ್ಬರು, ವರನನ್ನು "ಏನೋ, ಲವ್ ಮದುವೆನೋ?" ಎಂದು ಪ್ರಶ್ನಿಸಿದಾಗ, ೫೦೦೦ ವರದಕ್ಷಿಣೆ ಸಹಿತ ಬರುವಾಗ ಲವ್‌ಮಾಡದೆ ಹೇಗೆ?-ಎಂದನಂತೆ.

* * *

ಉತ್ತರದ ಪೌರುಷ ಇತ್ತೀಚೆಗೆ ಎಲ್ಲ ಮಂತ್ರಿಗಳಿಗೂ ಹೆಚ್ಚಾಗಿದೆ ಎಂಬುದು ಗಮನಿಸತಕ್ಕ ವಿಷಯವಾಗಿದೆ.

* * *

ಜವಾನ ಒಬ್ಬ ತನ್ನ ಸ್ವಂತ ಆನೆಯಮೇಲೆ ಕುಳಿತು ತಾನು ನೌಕರಿಮಾಡುತ್ತಿದ್ದ ಆಫೀಸಿಗೆ ಬಂದ, ಎಂಬ ಸುದ್ದಿಯನ್ನೋದಿದಮೇಲೆ, ಗಜವಾಹನದ ಮಹತ್ವವೇ ಮಾಸಿಹೋಗಿದೆ, ಎಂದು ಮಹನೀಯರೊಬ್ಬರು ಅಭಿಪ್ರಾಯ ಪಟ್ಟಿರುವರಂತೆ.

* * *

ಮೀನ ಮೇಷ ಎಣಿಸಿ ತಿಂಬುವವರು ಇನ್ನುಮೇಲೆ ಅವುಗಳಲ್ಲಿರಬಹುದಾದ ರೇಡಿಯಂಶಕ್ತಿಯನ್ನೂ ಗುಣಿಸಿ ತಿನ್ನಬೇಕಾಗುತ್ತದೆ, ಎಂದು ಅಮೇರಿಕಾದ ಬಿಕಿನಿ ಬಾಂಬಾಸ್ತ್ರ ಪಡೆಯವರೊಬ್ಬರು ಹೇಳಿರುವರಂತೆ.

* * *

ನಮ್ಮ ಅನೂಚಾರ ವೈದ್ಯ ಪದ್ಧತಿಗಳನ್ನುಪಯೋಗಿಸುವವರಿಗೆ ಪ್ರಪಂಚದಲ್ಲಿ ಬಹಳ ಶತ್ರುಗಳಿದಾರೆ (ಭಾಷಣ) ಪ್ರಪಂಚದಾಚೆ ಇನ್ನೂ ಅಧಿಕವಾಗಿದಾರೆ.

* * *

ರೈಲ್‌ಗಾಡಿಗಳಲ್ಲಿ ಭಿಕ್ಷುಕರು ಬಂದು ಕೂಗುವುದರಿಂದ ಮಕ್ಕಳನ್ನು ಹೆದರಿಸಿ ಹತೋಟಿಯಲ್ಲಿರಿಸಲು ಅನುಕೂಲವಾಗುತ್ತಿದೆ; ಆದ್ದರಿಂದ, ಅವರನ್ನು ಹೊರದೂಡುವುದು ಸರಿಯಲ್ಲ, ಎಂದು ಮಹಿಳಾ ಸಂಘವೊಂದು ಠರಾವು ಮಾಡಿದೆ.... ಏಕೆ? ಪ್ರಯಾಣಿಕರಲ್ಲೇ ಅದಕ್ಕೆ ಬೇಕಾದ ಮೂರ್ತಿಗಳು ಸಿಗುತ್ತವಲ್ಲಾ....

* * *

ಏಪ್ರಿಲ್ ತಿಂಗಳಲ್ಲಿನ ವಿವಾಹ ಮುಹೂರ್ತಗಳು ಅಷ್ಟು ಶುಭದಾಯಕವಲ್ಲವೆಂದು....ಒಬ್ಬರು ಬಾತ್ಮೀದಾರರು ತಿಳಿಸುತ್ತಾರೆ. ಉಳಿದ ತಿಂಗಳುಗಳಲ್ಲಿ ಮದುವೆ ಮಾಡಿಕೊಂಡವರ ಅನುಭವವೂ ಅದೇ ಎಂದು ತಿಳಿದರೆ, ಅವರಿಗೆ ಕೊಂಚ ಸಮಾಧಾನವಾದೀತು.

* * *

ಲೋವರ್ ಸೆಕೆಂಡರಿ ಪರೀಕ್ಷೆಯನ್ನು ತೆಗೆದುಹಾಕಿದ್ದರಿಂದ, ದೇಶಕ್ಕೇನೂ ನಷ್ಟವಿಲ್ಲ. (ಭಾಷಣ) ಮಿಡಲ್‌ಸ್ಕೂಲ್ ಮಾಸ್ತರುಗಳಿಗೂ ಇದರಿಂದ ಏನೂ ನಷ್ಟವಾಗಿಲ್ಲವೆಂದು ಅವರೂ ಜಂಬಕೊಚ್ಚಿಕೊಳ್ಳುತ್ತಿದ್ದಾರೆ.

* * *

ನಾನೂ ಪುರೋಹಿತನಾಗುತ್ತೇನೆ

ಎನ್ನರಸ! ಚಿನ್ನರಸ! ಪಟ್ಟದರಸ!
ಪ್ರಾಣಕಾಂತೆ! ಎನ್ನಾದಿರನ್ನೆ! ಗುಣಸಂಪನ್ನೆ!
ಭಾಗ್ಯಸಂಪನ್ನೆ! ಮುದ್ದುಮೋಹನ್ನೆ! ಅಷ್ಟೈಶ್ವರ್ಯಸಂಪನ್ನೆ!

* * *

ನನಗೆ ಆಶ್ಚರ್ಯವೋ ಆಶ್ಚರ್ಯ, ಇದನ್ನು ಕೇಳಿದಾಗ ಮದುವೆ ಮನೆಯಲ್ಲಿ. ಸುಮಾರು ಬಲಿತಗಂಡು, ಸರಿಸಮಾನಳಾದ ಹೆಣ್ಣಿನ ಆಧುನಿಕ ಮದುವೆ. ಓದಿದವರ ಮದುವೆ. ಅಂದಮೇಲೆ ಮದುವೆಯೆಲ್ಲಾ ಶಾಸ್ತ್ರಕ್ಕಾಗಿಯೇ ಎನ್ನಬಹುದಲ್ಲವೇ? ನೋಡುವುದೇನಿದೆ? ಮದುವೆಚಪ್ಪರದಲ್ಲಿ ಶಖೆಜಾಸ್ತಿ, ಚಪ್ಪರದಾಚೆ ಕೂತರೆ ಆದೀತು ಎಂದು ಹೊರಗಡೆ ಬಂದು ಕುಳಿತಿದ್ದೆ.

ಆಗಲೇ ಈ ಸರಸ ಸಂಭಾಷಣೆ ಚಪ್ಪರದೊಳಗಿಂದ ಕೇಳಿಬಂತು.

೧೦–೧೬ ವರುಷದವರು ಮದುವೆಯಾದಾಗ, ಹಾಗೂ ೬೦–೬೫ ವರ್ಷದವರು ಮದುವೆಯಾದಾಗ ಈರೀತಿ ಸಭಾಮಧ್ಯದಲ್ಲಿ ಎಲ್ಲರೆದುರಿಗೆ ಚೆಲ್ಲಾಟ ಆಡುವುದು ನ್ಯಾಯವೇ ಹೌದು! ಆದರೆ ಬಲಿತ ಪ್ರಾಯದವರು ಬಹಿರಂಗವಾಗಿ ಹೀಗೆ ಆಡುವುದು? ಇದರ ಮರ್ಮ ಏನಿರಬಹುದು ಎಂದು ತಿಳಿಯಲು ಚಪ್ಪರದೊಳಕ್ಕೆ ಆವಸರವಾಗಿ ಹೋದೆ.

ಅಲ್ಲೇನು ಗತಿ ಎಂತೀರಿ? ಹುಡುಗ ಹುಡುಗಿ, ಅಲ್ಲಲ್ಲಾ! ಯುವಕ ಯುವತಿ ಇಬ್ಬರೂ ತಮ್ಮ ತಮ್ಮ ಕಾಲು ಬೆರಳುಗಳನ್ನು ತಲೆಬಗ್ಗಿಸಿ ನೋಡುತ್ತಿದ್ದಾರೆ. ದೈನ್ಯತೆ ಇಬ್ಬರ ಮುಖದಲ್ಲೂ ಬೆವರಿನೊಡನೆ ಹನಿಗೂಡುತ್ತಿದೆ. ಹೆಣ್ಣಿಗಿಂತ ಗಂಡೇ ಹೆಚ್ಚು ಕೆಂಪೇರಿದ್ದಾನೆ. ಹೌದಲ್ಲಾ! ಕಿನ್ನೆ ಹೇಳಿದ್ದು ಸತ್ಯ ಎಂದುಕೊಂಡೆ.

ಆದರೆ ಇಬ್ಬರೂ ಮೌನ. ಮತ್ತೆ ನಾನು ಕೇಳಿದ ಸರಸ ಸಂಭಾಷಣೆ!

ನಾಗೋಲಿ ಸಡಗರದಲ್ಲೇ ಈ ಚೆಲ್ಲಾಟ ಅಲ್ಲವೇ?

* * *

"ಹೀಗೆ ಬನ್ನಿ! ನೀವು ಉಪ್ಪಿನ ಆನೆಮೇಲೆ ನಿಂತುಕೊಳ್ಳಿ" ಎಂದು ಪುರೋಹಿತರು, ಗಂಡಿನಕಡೆ ಪುರೋಹಿತರು, ಗಂಡನ್ನು ಅರ್ಧ ಪ್ರದಕ್ಷಿಣೆಮಾಡಿಸಿ ಆಕಡೆ

ಇದ್ದ ಉಪ್ಪಿನಾನೆಯಮೇಲಿ ಬಲಗಾಲಿಟ್ಟು ನಿಲ್ಲಿಸಿದರು. ಹೆಣ್ಣಿನಕಡೆ ಪುರೋಹಿತರು ಈಕಡೆ ಇದ್ದ ಅಕ್ಕಿಯ ಆನೆಯಕಡೆಗೆ ಹೆಣ್ಣನ್ನು ಕರೆತಂದು ಅಕ್ಕಿಯ ಆನೆಯಮೇಲೆ ಹೆಣ್ಣಿನ ಬಲಗಾಲನ್ನು ಇರಿಸುವಂತೆ ಹೇಳಿದರು.

ಈಕಡೆ ಹೆಣ್ಣಿನ ಕಡೆ ಪುರೋಹಿತರು ! ಕಾಳಿಯ ಚಿತ್ರದಲ್ಲಿ ಮಹಾತಾಯಿ ಕಠಾರಿಕಚ್ಚೆ ಹಾಕಿರುವುದನ್ನು ನೋಡಿಲ್ಲವೇ ? ಆ ರೀತಿಯ ಕಠಾರಿಕಚ್ಚೆಯನ್ನು ಕೆಂಪು ಮಗುಟದಲ್ಲಿ ಹಾಕಿ ನಿಂತಿದ್ದಾರೆ. ಗಂಟಿಟ್ಟ ಜುಟ್ಟನ್ನು ತಲೆಯಮೇಲಕ್ಕೆ ಟೋಫನ್ ಹಾಕುವ ರೀತಿಯಲ್ಲಿ ಹೊದಿಸಿದ್ದಾರೆ. ಪೂರ್ಣ ಮುಖಕ್ಷೌರ ಮಾಡಿದ ಕಾರಣ ಮೊಗ ಮುದ್ದಾಗಿ ಕಾಣುತ್ತಿದೆ. ಮಿಶೆ ಗಡ್ಡಗಳ ಕುರುಹೂ ಇಲ್ಲ. ನಾನಿದ್ದ ಕಡೆಯಿಂದ ಅವರ ಮುಖ ೪೫ ಡಿಗ್ರಿಗಳ ಕೋನದಲ್ಲಿ ಕಂಡಾಗ, ಚಪ್ಪರದ ಕಂಡಿ ಗಳಿಂದ ಅವರ ಮುಖದಮೇಲೆ ಬೆಳಕು ಅಲ್ಲಲ್ಲಿ ಚೆಲ್ಲಿದಾಗ, ಆಹಾ ! ಎಂತಹ ಹೆಂಗ ರುಳಿನ ಮುಖ! ಈತನಿಗೆ ಚೆಂದಾದ ಅಕ್ಕ ತಂಗಿಯರು ಇದ್ದೇ ಇರಬೇಕು! ಎನ್ನಿಸಿತು.

ಎನ್ನರಸ !	ಚೆನ್ನರಸ !	ಪಟ್ಟದರಸ !
ಪ್ರಾಣಕಾಂತ !	ಎನ್ನಾದಿರನ್ನ !	ಗುಣಸಂಪನ್ನ !

ಧ್ವನಿಕೂಡ ಸ್ತ್ರೀ ಕಂಠದ ಧ್ವನಿ. ಆ ಹೊತ್ತಿನಲ್ಲಿ ಈ ಮಾತುಗಳನ್ನಾಡು ವಾಗ, ಸಾಮಗಾನದ ಧ್ವನಿಯಲ್ಲೇ ಹೆಣ್ಣಿನ ಕಡೆಯ ಪುರೋಹಿತ ಪಲುಕುತ್ತಿದ್ದ– ಲಕ್ಷಣವಾಗಿ ಕುಂಕುಮ ಹಣೆಯಮೇಲೆ !

ಇದಕ್ಕೆ ಮಾರ್ದನಿಕೊಟ್ಟ ಗಂಡಿನಕಡೆಯ ಪುರೋಹಿತ ಗಂಡಿನಹಿಂದೆ ಘಟೋ ದ್ಗಜನಂತೆ ನಿಂತಿದ್ದಾನೆ. ಮೀಶೆಯನ್ನೇನೋ ಬಿಟ್ಟಿಲ್ಲ ! ದಿಟ ! ಆದರೆ ಮುಖ ಕ್ಷೌರ ಮಾಡಿಸಿಕೊಂಡು ಹದಿನೈದು ದಿನಗಳಾಗಿದೆ. ಅಂದಮೇಲೆ ಟಾಗೂರಿನ ಮರಿ ಯಂತೇ ಕಾಣಿಸುತ್ತಿದ್ದಾನೆ ! ಅಂದರೆ ಕರಡಿಯಂತೇ ಇದ್ದಾನೆ. ಕೂದಲಾವುದು? ಮೀಶೆಯಾವುದು? ಸುಲಭವಾಗಿ ತಿಳಿಯುವಂತಿಲ್ಲ. ಉಟ್ಟಪಂಚೆ ಮಗುಟದ ಮಣಿ ಕನ್ನು ಹೊಂದಿದೆ. ಪಂಚಕಚ್ಚೆ. ವಿಭೂತಿಯ ಪಟ್ಟೆಪಟ್ಟೆಗಳು ಹಣೆಯಮೇಲೆ, ತೋಳಮೇಲೆ, ಎದೆಯ ಕೂದಲಿನಮೇಲೆ. ಭೈರವ ಲೀಲಾ ಪ್ರಸಂಗದ ಕಾಲ ಭೈರವನಂತೆ ಕಾಲು ಮುಂದೆ ಕಾಲು ಹಾಕಿ ನಿಂತಿದಾನೆ ಗಂಡು ಪುರೋಹಿತ.

ಹೆಣ್ಣಿನಕಡೆಯ ಪುರೋಹಿತಳ ಸ್ತ್ರೀ ಕಂಠಕ್ಕೆ ಮಾರ್ದನಿಕೊಟ್ಟ ! ನೂರೆಂಟು ಹಾರ್ಮೋನಿಯಂಗಳು ಒಮ್ಮೆಲೇ ಒತ್ತಿದಂತಾದುವು. ಅಸ್ಸಾಮಿನಲ್ಲಾದ ಭೂಕಂಪದ ಮೊದಲ ನುಡಿಯ ಧ್ವನಿಯೋ ಗಂಡು ಪುರೋಹಿತನ ಕಂಠ, "ಲೇ" ಎಂದರಚುವ ಧಾಟಿ.

ಎನ್ನರಸಿ! ಚೆನ್ನರಸಿ! ಪಟ್ಟದರಸಿ!
ಪ್ರಾಣಕಾಂತೆ! ಎನ್ನಾದಿರನ್ನೆ! ಗುಣಸಂಪನ್ನೆ!
ಮುದ್ದುಮೋಹನ್ನೆ! ಭಾಗ್ಯಸಂಪನ್ನೆ! ಅಷ್ಟೈಶ್ವರ್ಯಸಂಪನ್ನೆ!

ನೋಡುತ್ತಲೇ ಇದ್ದೇನೆ. ಕೇಳುತ್ತಲೇ ಇದ್ದೇನೆ. ಗಂಡು ಪುರೋಹಿತನ ಕಣ್ಣು ಕೆಂಪೇರಿದೆ. ಧ್ವನಿ ಗಾತ್ರವಾಗಿದೆ. ಹೆಣ್ಣು ಪುರೋಹಿತನನ್ನೇ ದುರುಗುಟ್ಟಿ ಕೊಂಡು ನೋಡುತ್ತಿದ್ದಾನೆ.

* * *

ಗಂಡು ಹೆಣ್ಣನ್ನೂ ನೋಡಿದೆ. ಯಥಾಸ್ಥಿತಿ! ಕಾಲುಂಗುರ ನೋಡುತ್ತಾ ಹೆಣ್ಣು. ಕತ್ತರಿಸದೇ ಇದ್ದ, ಬೂಟ್ಸನಲ್ಲಿ ಚುಚ್ಚುವ ಕಾಲು ಹೆಬ್ಬೆರಳ ಉಗುರನ್ನೇ ಗಂಡು ವೀಕ್ಷಿಸುತ್ತಿದ್ದಾನೆ! ಅವರಿಬ್ಬರಿಗೂ ಲೋಕ ಜಡ! ಪ್ರಕೃತಿ ನೀರಸ! ವಾತಾವರಣವೆಲ್ಲಾ ಮಾಯಾಪೂರ್ಣ! ಶಾಶ್ವತವಾದ ಈಶ್ವರನು ಎಲ್ಲಿ, ಎಂದು, ಎಂದೆನಿಸುವ ಸಂದೇಹ ದೃಷ್ಟಿ!

* * *

ಆಗನ್ನಿಸಿತು ನನಗೆ. ಎಲ ಎಲಾ! ಈ ಆಧುನಿಕ ಯುವಕ ಯುವತಿಯರ ಮದುವೆಯನ್ನೂ "ಅಷ್ಟವರ್ಷಾತ್ ಭವೇತ್ ಕನ್ಯಾ" ರೀತಿಯಲ್ಲಿ ಆಚರಿಸುವುದರಿಂದ, ಮದುವೆಯ ಸೊಬಗನ್ನು ಅನುಭವಿಸುವವರು, ಎರಡೂ ಕಡೆಯ ಪುರೋಹಿತರೇ ವಿನಹಾ, ಗಂಡು ಹೆಣ್ಣಲ್ಲ! ಬೀಗರು ಬೀಗರಲ್ಲ! ಎಂದು.

* * *

ಯಾರ ಮದುವೆ ಆಗಲಿ, ಅದರ ಸರಸ ಸುಖಾನುಭವವನ್ನು ಪುರೋಹಿತರು, ವೈದಿಕರು, ಅನುಭವಿಸುವಷ್ಟು ಇನ್ನಾರೂ ಅನುಭವಿಸಲಾರರು ಎಂದಮೇಲೆ ಸರಸ ಜೀವನಕ್ಕೆ, ನೆನಪಿನ ರಸದೂಟಕ್ಕೆ, ವೈದೀಕ ವೃತ್ತಿಯೇ ಎತ್ತಿದ ಕೈ ಅಲ್ಲವೇ?

ಅದಕ್ಕೇ ನಾನು ಇನ್ನುಮೇಲೆ ಲೌಕಿಕವನ್ನು ಬಿಟ್ಟು ವೈದೀಕ ಧರ್ಮವನ್ನು ಅನುಸರಿಸಲು ಮನಸ್ಸು ಮಾಡಿದ್ದೇನೆ.

—ಪ್ರಸಾದ್

ಬೇಳೆಯ ಕಾಳು

(ಶ್ರೀ ಕುವೆಂಪು ಅವರ "ಮಿಂಚಿನ ಹುಳು" ಮಾದರಿ)

ಮೂಗನು ತಿವಿಯುವ ಒಗ್ಗರಣೆಯ ಘಮ
ವೆದ್ದಿತು ; ಇದ್ದುವು
ಮನಗಳು ಗಾಢ ಕ್ಷುಧಾಬ್ಧಿಯಲಿ.
ಮೌನವು ಹಸಿವಿನ ಮಡಿಲೊಳಗಿದ್ದಿತು.
ಭೇದವ ನೀಗಿ
ಅತೀತವಾಗಿ
ಹೊಟ್ಟೆಯೊಳೆಲ್ಲವು ಲಯವಾಗಿ
ಅಗುಳುಗಳೆಲ್ಲವು ಒಂದಾಗಿ
ಅನ್ನವೆ ಗೂಢ ಸಮಾಧಿಯು ಸೇರಿ
ಇದ್ದಿತು ಸಾರಿನ ಜೊತೆಯನು ಕೋರಿ.

ಮೇರೆಯೆ ಇಲ್ಲದ ಸಾರಿನ ಕಡಲೊಳು
ಮಿಣುಕಿ ಮಿಣುಕಿ
ಬೇಸಗೆ ಮಳೆಯಾ ಹನಿಯಂತೆ
ತೊಗರಿಯ ಬೇಳೆಯ ಕಾಂತಿಯ ಕಾಳ್ಗಳು
ಹೊಳೆದು ಅಳಿದು
ಅಳಿದು ಹೊಳೆದು
ಚಿಮ್ಮುತ ಎಲೆಯಿಂದೆಲೆಯೆಡೆಗೆ
ಚಿಮುಕಿಸಿ ಎಂಜಲನಡಿಗಡಿಗೆ
ಕುಣಿಯುತ ಮಿಣುಕುತ ಮನಸನು ಸೆಳೆದು
ಮೆರೆದುವು ತೊಗರಿಯ ಮಣಿಗಳು ಹೊಳೆದು.

ಬೇಳೆಯ ಸಾಲೊಳು ಕಾಳುಗಳೆಸೆದವು ;
ತೇಲುವ ಸಾಸಿವೆ
ಅವುಗಳನಣಕಿಸಿ ಮಿಣುಕಿದವು ;
ಸವುಟನೊಳಗೆ ಮುಳುಗೇಳುತ ಮಿಣುಕುತ
ಇದ್ದೆಡೆಯಲ್ಲೆ
ಬಾರದೆ ಅಲ್ಲೆ
ಒಣಗಿದ ಚಿನ್ನದ ಲತೆಯಿಂದ
ಉದುರುವ ಸುಮಗಳ ತೆರದಿಂದ
ಗಡಿಬಿಡದಾ ಬಿಡಿ ಸೈನಿಕರಂತೆ
ಹೊಳೆದುದು ಬೇಳೆಯ ಕಾಳ್ಗಳ ಸಂತೆ.

ಎವೆಯನು ಮುಚ್ಚದೆ, ಚಲಿಸದೆ ಸುಮ್ಮನೆ
ನೋಡಿದೆ ; ನೋಡಿದೆ!
ಕಾಳುಗಳಾಟವ ಮೈಮರೆತು!
ಹಸಿವಾವೇಶಾನಂದದ ಲಹರಿ
ಚಿತ್ತದಿ ಮೊರೆದು
ಎದೆಯೊಳು ಉರಿದು
ಕರಗಿಸಿತೆನ್ನೀ ವ್ಯಕ್ತಿಯನು ;
ದೊರೆಕಿಸಿತೆನಗಾ ಮುಕ್ತಿಯನು.
ಚಿಮ್ಮಿದ ಕಾಳಿನೊಳಾನೊಂದಾಗಿ
ಮಿನುಮಿನುಗಿದೆ ಬೇಳೆಯ ಕಾಳಾಗಿ.

—ಕವಿಮುನಿ.

—o—

ರವರು

ಪ್ರಜಾಪ್ರಭುತ್ವದ ಅಡಿಗಲ್ಲಿನಮೇಲೆ ನೆಲೆನಿಂತಿರುವ ನಮ್ಮದೇಶದಲ್ಲಿ ಇನ್ನು ಮೇಲೆ ಒಬ್ಬನು, ಒಬ್ಬನೇ. ಒಬ್ಬನಿಗೆ ಒಂದೇ ವೋಟು. ಅವನು ಎಷ್ಟೇ ಶ್ರೀಮಂತನಾಗಿರಲಿ, ಧೀಮಂತನಾಗಿರಲಿ, ಅವನ ಸುತ್ತಳತೆ ಎಷ್ಟೇ ದೊಡ್ಡದಿರಲಿ, ಅವನು ಒಬ್ಬನೇ. ಏಕವಚನವೇ ಅವನಿಗೆ ಸಲ್ಲತಕ್ಕದ್ದು. ಬಹುವಚನವಿಲ್ಲ. ನಿಜವಾದ ಪ್ರಜಾಪ್ರಭುತ್ವಕ್ಕೆ ಇದೇ ಹೆಗ್ಗುರುತು.

ಆದ್ದರಿಂದ, ಅವನ ಹೆಸರಿನ ಮುಂದೆ, ಬಹುವಚನ ಸೂಚಕವಾದ ಯಾವ ಪದಜೋಡಣೆಯನ್ನೂ ಸೇರಿಸಬಾರದೆಂಬುದು ನನ್ನ ವಾದ. ಶ್ರೀ, ಶ್ರೀಮತಿ–ಎಂಬ ಲಿಂಗಸೂಚಕ ಅಕ್ಷರವನ್ನು ಹಿಂದೆ ಸೇರಿಸೋಣ. ಕುಮಾರ ಕುಮಾರಿ ಎಂಬ ಭಾಗ್ಯ ಸೂಚಕ ಅಕ್ಷರಗಳನ್ನೂ ಅಗತ್ಯಬಿದ್ದಲ್ಲಿ ಸೇರಿಸೋಣ. ಡಾ||, ಪ್ರೊ||, ಆಚಾರ್ಯ, ಪಂಡಿತ, ವಿದ್ವಾನ್, ಗಾಯಕಪಟು ಮುಂತಾದ ವಿದ್ಯಾಸೂಚಕ ಪದಗಳನ್ನೂ ಸಮಯಬಿದ್ದಾಗ ಉಪಯೋಗಿಸೋಣ.

ಆದರೆ, ಶ್ರೀ ನಂಜುಂಡಯ್ಯ ಎಂಬಷ್ಟನ್ನೇ ಬಳಸದೆ, ಶ್ರೀ ನಂಜುಂಡಯ್ಯನವರು, ಎಂಬುದು ಏಕೆ? ಶ್ರೀ ಪಾರ್ಥಸಾರಥಿ ಅಯ್ಯಂಗಾರ್ರವರು ಎಂದೇಕೆ? ಅಯ್ಯಂಗಾರ್ ಎಂಬುದೇ ಬಹುಮಾನಸೂಚಕ ಪದ; ಜೊತೆಗೆ, ತೆಲುಗಿನ ಗಾರು ಬೇರೆ; ಅದೂ ಸಾಲದೆ, ರವರು ಎಂಬ ಮತ್ತೊಂದು ಬಾಲ! ಶ್ರೀಮತಿ ಲಕ್ಷ್ಮಮ್ಮ–ಸಾಕು. ಶ್ರೀಮತಿ ಲಕ್ಷ್ಮಮ್ಮನ್+ರವರು ಎಂದು ಆಕೆಗೆ 'ಗಂಡು' ಗುರುತಾದ ಳ್ ನ್ನು ಕೊಡದೆ ನ್ ಕೊಟ್ಟು, ಅವರು ಸೇರಿಸಿ ಕಣ್ಣೊರಸುವುದು ತಪ್ಪಲ್ಲವೆ?

ಅಲ್ಲದೆ, ರವರು, ಅವರು, ಎಂದು ಸೇರಿಸುವುದನ್ನು ನಿಲ್ಲಿಸಿದರೆ, ಭಾಷಣಗಳಲ್ಲಿ ಕಾಲ, ಲೇಖನಗಳಲ್ಲಿ ಕಾಗದ, ಶಾಯಿ, ಬರೆವಣಿಗೆಯಲ್ಲಿ ಪೆನ್ನುಗಳ ನಿಬ್ಬು, ಪೆನ್ಸಿಲ್ ಸೀಸ-ಇವೆಲ್ಲ ಉಳಿಯುತ್ತವೆ. ಲಕ್ಷಾಂತರ ರೂಪಾಯಿ ಲಾಭ ಬರುತ್ತದೆ. ಯಾವುದಾದರೂ ಒಂದು ಕನ್ನಡ ಪತ್ರಿಕೆಯನ್ನು ನೋಡಿದರೆ, ಇದರ ನಿಜಾಂಶ ತಿಳಿದು ಬರುತ್ತದೆ. ಶ್ರೀ ಕುಟ್ಟಪ್ಪ ಎಂದುಮಾತ್ರ ಹೇಳದೆ, ಶ್ರೀ ಕುಟ್ಟಪ್ಪನವರು ಎಂದು ಅನಾವಶ್ಯಕವಾಗಿ ಉಪಯೋಗಿಸುವುದರಿಂದ, ಆ ಮೂರು ಅಕ್ಷರಗಳನ್ನೂ ಒಂದೇ ಕಾಲಂನಲ್ಲಿ ೩೨ಬಾರಿ ಅಚ್ಚುಹಾಕಬೇಕಾಗಿ ಬಂದಿದೆ, ನಿನ್ನೆ ಒಂದು ಪೇಪರಿನವರಿಗೆ.

ಆಮೇಲೆ ಇನ್ನೊಂದು ತೊಂದರೆ ಶ್ರೀ ಕೃಷ್ಣಮಾಚಾರಿ ಎಂದು ಮಾತ್ರ ಹೇಳಿದರೆ, ವಿನಯ ಸಾಲದೆಂಬ ತಪ್ಪು ಅಭಿಪ್ರಾಯದಿಂದ, ನಾವು ದನಗಳು ಇಲಿಗಳು ಬೆಟ್ಟಗಳು ಹೂವುಗಳು ನಕ್ಷತ್ರಗಳು ಎಂಬವಕ್ಕೆ ಮಾತ್ರ ಉಪಯೋಗಿಸಬಹುದಾದ ಗಳುವನ್ನು ಅವರಿಗೂ ತಗುಲಿಸುತ್ತೇವೆ. ಇದು ಯಾವ ನ್ಯಾಯ? ಇದರ ಅಸಂಬದ್ಧವನ್ನು ತಿಳಿದೋ ಏನೋ, ಶ್ರೀ ಕೃಷ್ಣಮಾಚಾರಿಗಳವರು ಎಂದು ಡಬ್ಬಲ್ ಬಹುವಚನ ಹಾಕಿ, ಅವರ ಹಣೆಗೆ ಮುಲಾಮು ಸವರುತ್ತೇವೆ.

ಇಂಥ ಅಧಿಕ ಪ್ರಸಂಗಗಳಿಗೆಲ್ಲ ಒಂದೇ ಮದ್ದು. ರವರು, ನ್‌ರವರು, ನವರು, ಅವರು, ರ್ರವರು, ಗಳವರು, ಎಲ್ಲವನ್ನೂ ಒಟ್ಟಿಗೇ ಬಿಸುಟು, ಕಾಲ ಹಣ ಅಚ್ಚಿನ ಮೊಳೆ ಕಾಗದ ಇಂಕಿ ಎಲ್ಲವನ್ನೂ ಉಳಿಸಿ,–ಬರಿಯ ಶ್ರೀಯನ್ನು ಮಾತ್ರ ಬಳಸುವುದು.

ಕನ್ನಡಿಗರಿಗಿನ್ನಾದರೂ ಕಣ್ಣು ಕಾಣಿಸುವುದೆ?

ಸಾ. ಕ.

ವಿಧಾನ ಸೌಧವನ್ನು ವಿನೋದ ಸೌಧ ಎಂದು ಹೇಳುವುದು ಅಖಂಡ ಕರ್ಣಾಟಕದ ಇತರ ಪ್ರದೇಶಗಳ ಜನರ ಅಸಮಾಧಾನವನ್ನು ಕೆರಳಿಸಿದಂತಾಗುವುದೆಂದು ಒಬ್ಬರು ಅಭಿಪ್ರಾಯಪಟ್ಟಿದಾರೆ.

* * *

ಬೊಂಬಾಯಿ ಸಂಸ್ಥಾನದ ಕಾಲೇಜುಗಳಲ್ಲೆಲ್ಲ ಹಿಂದಿಯಲ್ಲೇ ವಿಷಯಗಳನ್ನು ಬೋಧೆಮಾಡುತ್ತಾರಂತೆ.... ಹಾಗಾದರೆ, ಹಿಂದಿಗೂ ಕೂಡ ಪಾಪ, ಇಂದು ಇಂಗ್ಲೀಷಿಗಾಗಿರುವ ಅಧೋಗತಿಯೇ ಪ್ರಾಪ್ತಿ.

* * *

ಹಣ ಪ್ರಣಯಿಗಳು

ತಿಂಗಳ ಮೊದಲದಿನ ಶನಿವಾರ ಕಂಟ್ರೋಲರ ಕಚೇರಿಯಿಂದ ಹಿಂತಿರುಗುತ್ತಿರುವ ನೌಕರ ಹಾದಿಯ ತುದಿಯಲ್ಲಿ ಮಾರ್ವಾಡಿಯನ್ನು ಕಂಡು ಹಾಡುತ್ತಾನೆ.

ಎನ್ ಅರಸಿ ನೀನ್ ಅಲ್ಲಿ
ನಿನ್ ಕಂಡು ನಾನ್ ಇಲ್ಲಿ
ಚಿನ್ ಮಲ್ಲ ನೀನಿರುವೆ
ನಾನ್ ಪೋಪ ಹಾದಿಯಲಿ!

ಸುಡುತಿರುವ ಹಗಲಲ್ಲಿ
ಹೊಡಿಯುತಿಹ ಶಖೆಯಲ್ಲಿ
ಗಾಡಿಗಳ ನೆರಳಲ್ಲಿ
ಝಾಡಮಾಲಿಗಳತ್ತ ಪೋಗುವಲ್ಲಿ

ಕಪ್ಪೆವೊಲು ನಾನಿದ್ದು
ಹಾವಿನೊಲು ನೀನಿಂತೆ
ರೋಗಿವೊಲಾ ನಿರುತಿರಲು
ನೀನೆ ಚರಮ ಶುಶ್ರುತನು.

ಬಡ್ಡಿವೊಲಾ ನಿರುವೆಂದು
ಚಕ್ರವೊಲು ನೀನಿರುವೆ
ಎನ್ನ ಕೆಟ್ಟಕನಸು ನೀನ್
ನಿನ್ನ ಸುಖಸ್ವಪ್ನ ನಾನ್

ಸಂಧಿಸಲು ನಿನಗುಂಟು
ತಿಂಗಳಿನ ವಂತಿಕೆಯು
ಸಂದಿಹಾದಿ ಯಲಿರಲು
ಪಂಗನಾಮ ಹಚ್ಚುವೆನು!

ಎನ್ ಅರಸಿ ನೀನ್ ಅಲ್ಲೇ!
ನಿನ್ ಕಂಡು ನಾನ್ ಇಲ್ಲೇ!
ಚಿನ್ ಮಲ್ಲ ನೀನಿರುವೆ!
ಮನದಾಶೆ ರಾಜ್ಯದಲಿ!.

ಸರಸಕ್ಕನ ಆಸೆ

ಖಾಲೀಪಟ್ಣ, ಕುಂಬ್ಳೂರು.
1–4–54

ಚಿ|| ಸೌ|| ಹ|| ಕುಂ|| ಶೋ|| ಸಾತುವಿಗೆ ಸರಸುವಿನ ಆಶೀರ್ವಾದಗಳು. **ಅದಾಗಿ ಈ ವರೆಗೆ ಉಭಯ ಕುಶಲೋಪರಿ ಸಾಂಪ್ರತ.**

ನಿನಗೊಂದು ಅಗತ್ಯವಾದ ಕೆಲಸ ಒಪ್ಪಿಸುತ್ತೇನೆ, ಕ್ಷಮಿಸು. ಅಟ್ಟದ ಮೇಲಿರುವ ಮುರುಕು ಮಂಚಗಳ ಕಟ್ಟಿನ ಹಿಂಬದಿಯಲ್ಲಿ, ಬೊಂಬೇ ಸಾಮಾನಿನ ಸಂದೂಕದಡಿಯಲ್ಲಿ ಜಾಯಿಕಾಯಿ ಪೆಟ್ಟಿಗೆ ಒಂದಿದೆ (ಮುಚ್ಚಳದಲ್ಲಿ ಎರಡು ಹಲಗೆ ಹೋಗಿದ್ದರೂ ಬೀಗ ಹಾಕಲ್ಪಟ್ಟಿದೆ) ಅದರ ಬೀಗದಕ್ಕೆ ಎಲ್ಲಿದೆಯೋ ನೆನಪಿಲ್ಲ. ಅಂದಹಾಗೇ ಅದು ಅಜ್ಜೀ ಪೆಟ್ಟಿಗೆ—ಅಜ್ಜೀ ಹೋದಮೇಲೆ ಅದನ್ನ ತೆಗೆದವರೇ ಇಲ್ಲ. ಆದ್ದರಿಂದ ಬೀಗದಕ್ಕೆ ಸಿಕ್ಕುವುದೂ ಸಾಧ್ಯವಿಲ್ಲ. ಚಿಂತೆಯಿಲ್ಲ, ಅಪ್ಪನ್ನ ಕೇಳಿ ಬೀಗ ಒಡಿ ಅದರೊಳಗೆ ವಾಲೇಗರೀದು ಪುಸ್ತಕಗಳಿರಬೇಕು—ಐರಾವತ, ಅನುಂದ್ರತೀ ಕಲ್ಯಾಣ, ಗಜೇಂದ್ರಮೋಕ್ಷ, ಇತ್ಯಾದಿ ಬರೆದಿರುವುದು. ಅದನ್ನು ಜೋಪಾನವಾಗಿ ತೆಗೆದು ಪಾರ್ಸಲ್‌ಮಾಡು. ಹಾಗೇ, ಅಜ್ಜಿ ಅವರಮ್ಮನಕಾಲದ್ದು—ಗೌರೀಪೂಜೆ ಹಾಡುಗಳು, ಹಸೇಗೆ ಕರೆದದ್ದು, ಆರತಿಎತ್ತಿದ್ದು, ಮೊಗ್ಗುಮುಡಿಸಿದ್ದು, ಚಂಡಾಡಿದ್ದು—ಈ ಹಾಡಗಳ್ನೆಲ್ಲ ಬರೆದಿದ್ದ ಪುಸ್ತಕ ಒಂದನ್ನ ತೋರಿಸಿದ್ದರು. ಅವರ ಬಳಿ ಚುಕ್ಕೆಹಸೆ, ಸುತ್ತೋ ಹಸೆ, ಕಾರಣೆ ಬರಕೊಂಡಿದ್ದ ಬುಕ್ಕು ಸಹ ನೋಡಿದ್ದೆ. ಅವೆಲ್ಲ ಹುಡುಕಿ ಮರೆಯದೇ ಕಳಿಸಿಕೊಡು. ರಿಜಿಸ್ಟರ್ಡ್ ಪೋಸ್ಟ್ ಮಾಡು. ನಾನು ಬಂದಾಗ ನಿನ್ನ ದುಡ್ಡು ಕೊಡುತ್ತೇನೆ.

ಇಲ್ಲಿ ಮಕ್ಕಳು, ನಿಮ್ಮ ಭಾವನವರು, ಹಸು, ನಾಯಿ ಆದಿಯಾಗಿ ಸರ್ವರೂ ಕ್ಷೇಮ. ಅಪ್ಪನಿಗೆ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತೀ ಆಶೀರ್ವಾದಗಳು,
ಸರಸಕ್ಕ.

ಮೈಸೂರು.
2–4–54

ಹಿರಿಯಕ್ಕನಿಗೆ ನಮಸ್ಕಾರಗಳು.

ನಿಮ್ಮ ಕಾಗದ ಈಗ ತಾನೇ ಬಂತು. ಮತ್ತು ಅದು ನಮ್ಮನ್ನೆಲ್ಲ ಆಶ್ಚರ್ಯ ಮತ್ತು ಘಾಬರಿಯಲ್ಲಿ ಮುಳುಗಿಸಿದೆ.

ಮೊದಲನೆಯದಾಗಿ, ಗ್ರಾಜುಯೇಟ್ ಆಗಿರುವ ನೀನು ಇದುವರೆಗೂ ಪಿತೃಭಾಷೆ (ಇಂಗ್ಲಿಷ್)ಯಲ್ಲಿ ಕಾಗದ ಬರೆಯುತ್ತಿದ್ದವಳು ಈಗ ಇದ್ದಕ್ಕಿದ್ದ ಹಾಗೇ ಮಾತೃಭಾಷೆಯಲ್ಲಿ, ಅದರಲ್ಲೂ ಆ ಓಬೀರಾಯನ ಶೈಲಿಯಲ್ಲಿ ಕಾಗದ ಬರೆದಿದ್ದೀಯಲ್ಲ ಕಾರಣವೇನು ?

ಅಲ್ಲದೆ ಸರಸಕ್ಕ, ನೀನು ಕೇಳುವುದೇನು? ಅಜ್ಜ ಜಾಯಿಕಾಯಿ ಪೆಟ್ಟಿಗೆ ಸುದ್ದಿ ನಿನಗೇಕೆ? ಆ ಪಾಲೇಗರೀ ಪುಸ್ತಕಗಳನ್ನು ಕಟ್ಟಿಕೊಂಡು ನೀನೇನು ಮಾಡ ಬೇಕಾಗಿದೆ? ಯಾಕೆ ಹೀಗೆ ಬರೆದಿದ್ದೀಯೋ ಎಂದು ನಮಗೆ ತುಂಬಾ ಘಾಬರಿಯಾಗಿ ಬಿಟ್ಟಿದೆ. ಅಪ್ಪನಂತೂ ಭೂಮಿಗೇ ಇಳಿದು ಕೂತುಬಿಟ್ಟಿದಾರೆ. ನೀನು ಹುಷಾರಾ ಗಿರುವುದಕ್ಕೆ ದಯವಿಟ್ಟು ಕೂಡಲೇ ಬರೆಯುವುದು.

ಇಂತೀನಮಸ್ಕಾರಗಳು,
ಸಾತು.

ಕುಂಬ್ಳೂರು.
ಸಾತುವಿಗೆ ಆಶೀರ್ವಾದಗಳು. 3-4-54

ಒಳ್ಳೆಯ ಅಪ್ಪ, ಒಳ್ಳೆಯ ತಂಗಿ, ಇಷ್ಟು ಗಾಭರಿಯಾಗಬೇಕೆ? ನನಗೇನೂ ಆಗಿಲ್ಲ, ಸಂಪೂರ್ಣವಾಗಿ ಆರೋಗ್ಯವಂತಳಾಗಿದ್ದೇನೆ. ನಾನು ಬರೆದಿರುವ ವಿಷಯ ವಿವರಿಸುತ್ತೇನೆ.

ಜನಗಳಿಗೆ ಒಂದೊಂದು ಸಾರಿ ಒಂದೊಂದು ಹುಚ್ಚು ಹಿಡಿಯುತ್ತೆ. ಅದೂ ಸಾಂಕ್ರಾಮಿಕ ಜಾಡ್ಯದ ಹಾಗೆ – ಹರಡೇಬಿಡುತ್ತೆ. ಈಗ 'ಸಂಸ್ಕೃತಿ' ಜಾಡ್ಯ ಹರಡಿದೆ. ನೋಡಿದೆಯೋ ಇಲ್ಲವೋ ವರ್ತಮಾನ ಪತ್ರಿಕೆಗಳಲ್ಲಿ – ಮೊನ್ನೆ ರಷ್ಯನ್ ಸಂಸ್ಕೃತಿ ನಿಯೋಗ ಗೋಷ್ಠಿ ಬಂದಿದ್ದಾಗ ಅವರಿಗೆ ನಮ್ಮ ಸೋದರಿಯರು ಹಣೆಗಿಟ್ಟು, ಹೂ ಮುಡಿಸಿ (ಮಹಿಳೆಯರಿಗೆ!, ಆರತಿಯೆತ್ತಿ, ಇಡಿಗಾಯಿ ಒಡೆದರಂತೆ! "ಹಿತ್ತಲ ಗಿಡ ಮದ್ದಲ್ಲ" ಅನ್ನೋದು ಬದಲಾಯ್ಸಿ, ಹಿತ್ತಲ ಗಿಡವೇ ಮದ್ದಾಗುತ್ತಿದೆ! ನಮ್ಮ ಘನ ಸರ್ಕಾರವೂ ಸಹ – (ತೆರಿಗೆ ತಲೆ ಒಡೆಯುವಷ್ಟು ಹೆಚ್ಚಿಸಿದ್ದರೂ ಚಿಂತಿಲ್ಲ)—'ಸಂಸ್ಕೃತಿ ಪುನರುಜ್ಜೀವನ'ಕ್ಕೆ ಸಾವಿರಾರು ರೂಪಾಯಿ ಸಾಂಕ್ಷನ್ ಮಾಡಿದಾರೆ. ಅದಕ್ಕೇ ನಾನೂ ಈಗ ನಮ್ಮಜ್ಜೀ ಮುತ್ತಜ್ಜೀ ಸಂಸ್ಕೃತೀನ—ಹಾಡು, ಹಸೆ, ಸೋಬಾನೆಗಳ್ನ—ಮೇಲಕ್ಕೆಬ್ಬಿಸಿಕೊಳ್ಳುತ್ತೇನೆ. ನನಗೂ ಯಾವುದಾದರೊಂದು ನಿಯೋಗ ಗೋಷ್ಠಿ ಯಲ್ಲಿ ಅವಕಾಶ ದೊರಕೀತು, ಇದೇ ನೆಪದಲ್ಲಿ ಹೊರ ದೇಶಗಳ ಪರ್ಯಟನೆ ಸುಯೋಗ ಸಿಕ್ಕೀತು ಅಂತ ಹಿರಿಯಾಶೆ!

ಅಪ್ಪನ್ನ ಈಗ ನಿಶ್ಚಿಂತೆಯಾಗಿರಲಿಕ್ಕೆ ಹೇಳು. ನಾಳೆಯೇ ಪಾರ್ಸಲ್ ಕಳಿಸಿಬಿಡು.

ಇಂತೀ ಆಶೀರ್ವಾದಗಳು,
ಸರಸಕ್ಕ.

ಸೂಚನೆ:—ಅಂದ ಹಾಗೇ ಆ ಕಾಗದದ ಶೈಲಿಯೂ ಸಹ ಈ "ಸಂಸ್ಕೃತಿ ಪುನರುಜ್ಜೀವನ"ದಲ್ಲಿ ನನ್ನ ಮೊದಲನೇ ಮೆಟ್ಟಿಲು.

—ಸುನಂದಮ್ಮ.

ಜಾತಕ ಫಲ

(ಒಂದು ಕವನ)

ಹದಿನೇಳು? ಹದಿನೆಂಟು? ಇರಲಿ ...ನಾ ಬಿಟ್ಟೆ! ತುರುಪೇನು? ಡೈಮಂಡು!
ಯಾರದೀ ಸಲ ಇಳಿತ ..ಆಡುತ್ತಿದ್ದೆವು ನಾವು, ಇಪ್ಪತ್ತೆಂಟರ ಆಟ.
ಆಡಬಾರದೆ ಸುಮ್ಮನೆ?
ಆಡಿದೆವು ..ಮಾತಾಡಿದೆವು, ನೂರೆಂಟು ಕಗ್ಗ—ಬಡ್ಜೆಟ್ಟು, ಕಾಮೆಟ್ಟು,
ಸಿಂಪೂರಿನಲಿ ಮೊನ್ನೆ ಸತ್ತ ಜನರ ಲೆಕ್ಕ, ಗ್ರಹಚಾರ, ದುಶ್ಶಕುನ,
ಸಾಡೆ ಸಾಥಿಯು ಹೊಡೆತ ...ಆಗೆಂದ ಶಾಸ್ತ್ರಿ (ಎನಬಾರದಾಗಿತ್ತು)
"ಜ್ಯೋತಿಷವು ಸುಳ್ಳಲ್ಲ" ಕಡೆಯ ಪಟ್ಟನು ಹೊಡೆವ, ಜಾಕಿ ಇತ್ತವನಲ್ಲಿ!
"ರಾಶಿ ಫಲ, ಕುಂಡಲಿ, ಅಪ್ಪನಾಣೆಗೂ ನಿಜ".
ನನ್ನ ಬಲಗಡೆ ಕುಳಿತು ಎಲೆಗಳನು ಕಲಸುತ್ತ ತೇಲುಗಣ್ಣನು ಬೀರಿ
ತೂಕಡಿಕೆಯನು, ಪಾಪ, ತಲೆಯಾಚೆ ದೂಡುತ್ತ, ಆಕಳಿಸಿದ, ತಮ್ಮಣ್ಣ!
"ಶಾಸ್ತ್ರಿ! ಲೋ! ಸಾಕು ಬಿಡೋ" ಎನ್ನುತ್ತ, "ಈ ಜಾತಕವನು ನೋಡೋ!
ಇದರ ಫಲವನು ಹೇಳೋ" ಎಂದನವ! (ಎನಬಾರದಾಗಿತ್ತು).
"ಹಿಡಿ" ಹಿಡಿದ; "ನೋಡು" ನೋಡಿದ; "ಹೇಳು" ಹೇಳಿದ.
(ಹೇಳಬಾರದಿತ್ತು) "ಈ ಕೂಸಿನ ತಂದೆ ಇಂದಿಗೇ ಸಾಯುವನು"
....ತಮ್ಮಣ್ಣನ ಮೇಲೆ ಸಿಡಿಲೆರಗಿದಂತಾಯ್ತು. ತುಟಿ ಒಣಗಿ ತುಸು ನಕ್ಕ,
"ಇರಲಿ ಬಿಡೋ, ಬರಿ ಬುರುಡೆ, ಶಾಸ್ತ್ರಿ ಶುಂಠಕಾಯಿ, ಜ್ಯೋತಿಷವೆ ಕಗ್ಗ,
ನಿನಗಿಂದು ಮರಣವೆ? ಇಲ್ಲೆ ಇರು, ನಿಶೆ ಎಲ್ಲ,"—ಸಂತೈಸಿ ಕೂರಿಸಿದೆವು.
........ಹನ್ನೆರಡಕ್ಕಿನ್ನೈದು ನಿಮಿಷವಿದೆ—ಎನುವಾಗ
ಓಡೋಡಿ ಬಂದನಾ ತಮ್ಮಣ್ಣನ ತಮ್ಮ!
ಕೂಗಿ ಹೇಳಿದ ಅಲ್ಲೆ........"ಡ್ರೈವರ್ ಎಂಕಟರಮಣ"
ಮುಂದಾಡಲಾರದೆ ತತ್ತರಿಸಿದ ಹೃದ.
"ಏನಾಯ್ತೊ?"
"ಸತ್ತ"
ಸಿಡಿಲೆರಗಿದಂತಾಯ್ತು ತಮ್ಮಣ್ಣಗಾಗಲೆ
ಮುರಿಯಿತವನ ಮನ-ಮನೆ ಎರಡೂ.

—ಶ್ರೀಮತಿ ರುದ್ರಮ್ಮ.

ಕ್ಯಾಮರಾ ಸಹಿತ

ಸ್ಟೂಡಿಯೊ ಒಳಕ್ಕೆ ಬರುವ ಗಿರಾಕಿಗಳು ನನಗೆ ಕೊಡುವ ತೊಂದರೆ ಒಂದು ರೀತಿಯದಾದರೆ, ಸ್ಟೂಡಿಯೋ ಹೊರಗೆ ನನಗೆ ಸಿಗುವ ಗಿರಾಕಿಗಳಿಂದಾಗುವ ತೊಂದರೆ ಗಳು ನೂರೆಂಟು.

ಸ್ಟೂಡಿಯೊ ಒಳಕ್ಕೆ ಬರುವವರು ಹಲವಾರು ಬಗೆ. ಪ್ರಿಯ, ಪ್ರೇಯಸಿಯರು ಅವರಲ್ಲಿ ಬಹು ಮಂದಿ. ಹರೆಯದ ಹುರುಪಿನಲ್ಲಿ ಅವರಿಗೆ ವಿವೇಕ ಕಡಿಮೆ. ನನ್ನ ಮುಂದೆಯೇ ಕಿಲ ಕಿಲ ನಗುತ್ತಾರೆ, ಹುಚ್ಚು ಹುಚ್ಚಾಗಿ ಲಲ್ಲೆ ಆಡುತ್ತಾರೆ, ಇಬ್ಬರೂ ಭುಜಕ್ಕೆ ಭುಜಕೊಟ್ಟು, ಕನ್ನಡಿಯೊಳಕ್ಕೆ ಇಣಿಕಿದ್ದೂ, ಇಣಿಕಿದ್ದೇ. ಅವರನ್ನು ಶಾಂತವಾಗಿ ಪೀಠದಲ್ಲಿ ಕುಳ್ಳಿರಿಸುವುದೇ ಭಗೀರಥ ಪ್ರಯತ್ನ. ಕೂಸನ್ನು ಹೊತ್ತು ತರುವ ಜನಕ ಜನನಿಯರು ಬಹು ಮಂದಿ. ಅವರ ಜಂಭಕ್ಕೆ ಮಿತಿಯೇ ಇಲ್ಲ. ನಾನು ಮಾದರಿಗಾಗಿ ಗೋಡೆಗೆ ತಗುಲಿಸಿರುವ ಎಲ್ಲ ಫೋಟೋಗಳಿಗಿಂತ ಆ ಮುದ್ದು ಮಣಿಯದು ನಯನ ಮನೋಹರವಾಗಿರುತ್ತದೆ, ಎಂದು ಅವರು ನನಗೆ ಬೋಧಿಸು ತ್ತಾರೆ. ಇಂಥ ಮಗುವನ್ನು ನೀವು ಎಂದಾದರೂ ಕಂಡಿದಿರೇನ್ರಿ, ಎಂದು ಅವರು ನನ್ನನ್ನೇ ಮೂದಲಿಸುತ್ತಾರೆ! ಆ ಪ್ರೇಮದ ಮುದ್ದೆಯ ಮೂಗನ್ನೊರಸುವುದರಲ್ಲೇ ಒಂದೆರಡು ಗಂಟೆಗಳ ಕಾಲ ಖರ್ಚಾಗುತ್ತದೆ. ಎಷ್ಟೇ ಚೆನ್ನಾಗಿ ತೆಗೆದುಕೊಟ್ಟರೂ, ಅದರ ಸಂಪೂರ್ಣ ಲಕ್ಷಣ ಹೊರಬರಲಿಲ್ಲ, ಭಾವ ಚಿತ್ರ ನೋಡಿದರೆ ಮಗು ಅಪ್ಪನ ಹಾಗಿದೆ ಎಂದು ಎಲ್ಲರೂ ನಗುತ್ತಾರೆ, ಎಂದು ತಾಯಿ ಗೊಣಗುತ್ತಾಳೆ. ಆದರೆ, ನಾನೇನು ಮಾಡಲಿ? ನನ್ನ ಕ್ಯಾಮರಾಗೆ ಸುಳ್ಳು ಕಲಿಸಲಾರೆ, ನಾನು.

ಹೊರಗಡೆಗೆ ನಮ್ಮನ್ನು ಕರೆಯುವವರು ಮುಖ್ಯವಾಗಿ ಕಾರ್ಯದರ್ಶಿಗಳು, ಸಮ್ಮೇಳನಗಳ ವ್ಯವಸ್ಥಾಪಕರು, ಗ್ರೂಪು ತೆಗೆಯುವುದಕ್ಕಾಗಿ. ಇಂಥವರ ಹತ್ತಿರ ಮುಂಗಡ ಹಣ ಪಡೆಯುವುದೇ ಮೇಲು. ಏಕೆಂದರೆ, ಹತ್ತೂಜನರ ಹಣ, ಎತ್ತೆತ್ತಲೋ ಪೋಲು. ಗ್ರೂಪುಗಳಲ್ಲಿ ಹೆಂಗಸರೂ ಇದ್ದರೆ, ತಾಪತ್ರಯ. ಅವರ ಎಡಬಲಗಳ ಸೀಟಿಗಾಗಿ, ಹಿಂದಿನ ನಿಲ್ದಾಣಕ್ಕಾಗಿ, ಭಾರಿ ಜಗಳಗಳಾಗುವುದುಂಟು. ಗ್ರೂಪು ತೆಗೆದ ಮೇಲೆ, ಹಲವು ಪಟಿಂಗರು ಸ್ಟೂಡಿಯೋಗೆ ಬಂದು, ಅಕ್ಕಪಕ್ಕದ ಅವರಿಬ್ಬರನ್ನು ಮಾತ್ರ ಕತ್ತರಿಸಿ ಬಿತ್ತರಿಸಿ ಕೊಡುವಂತೆ ಕಾಡುತ್ತಾರೆ. ಇದೊಂದು ಗೋಳು.

ಈಚೀಚೆಗೆ ಬಿಳಿ ಟೋಪಿ, ಬಿಳಿ ಷರಾಯಿ, ಬಿಳಿ ಪಂಚೆಗಳ ಅವಾಂತರ ಹೆಚ್ಚಿ ಗ್ರೂಪನ್ನು ನೋಡಿದರೆ, ಬಿಳೀ ಗೋಡೆಗೆ ಕರೀ ಮೂರ್ತಿಗಳನ್ನು ಅಂಟಿಸಿದ ಹಾಗೆ ಭಾಸವಾಗುತ್ತದೆ. ತಲೆಗೆ ಸವರಿರುವ ಕ್ರೀಮು ಬಿಸಲಿಗೆ ಹೊಳೆಯುತ್ತದೆ; ಕೈ ಗಡಿಯಾರದ ಗಾಜು ಸೂರ್ಯನನ್ನು ಪ್ರತಿಬಿಂಬಿಸುತ್ತದೆ; ಕನ್ನಡಕದವರ ತಲೆ ತಗ್ಗಿಸಿ, ಕಾಲುಗಳನ್ನು ಕೂಡಿಸಿ, ಕೈಗಳನ್ನು ಸಡಲಿಸಿ, ಮೂಗಿನ ಡೊಂಕನ್ನು ತಿದ್ದಿ, ರೆಡಿ ಎನ್ನುವ ಹೊತ್ತಿಗೆ, ಬೇಜಾರು ಹತ್ತಿ, ಈ ಕಸಬೇ ಹೊಲಸು ಎನಿಸಿಬಿಡುತ್ತದೆ. ಈಚೆಗೆ ಹೊಗೆಗನ್ನಡಕಗಳು ಬೇರೆ ಹಲವು ಕೃತಕ ಕುರುಡರ ಪ್ಯಾಶನ್ನಾಗಿದೆ.

ಆಸನ ವ್ಯವಸ್ಥೆಯ ಸಮಸ್ಯೆ ಒಂದು ದೊಡ್ಡ ತಲೆನೋವು. ಅದನ್ನ ಕಾರ್ಯ ದರ್ಶಿ ಮೊದಲೇ ಮಾಡಿದ್ದರೆ, ಕ್ಷೇಮ. ಆದರೆ, ಅದಕ್ಕೆ ಬೇಕಾದ ದಕ್ಷತೆ ದರ್ಪ ದೂರಾಲೋಚನೆ,....ಆತನಿಗಿರುವುದು ಅಪರೂಪ. ಹಲವರನ್ನಾದರೂ ನೆಲದ ಮೇಲೆ ಕೂರಿಸದೆ ವಿಧಿ ಇಲ್ಲ ಎಂಬ ಪರಿಸ್ಥಿತಿ ಒದಗಿದಾಗ, ಕಾರ್ಯದರ್ಶಿ ಕಕ್ಕಾಬಿಕ್ಕಿಯಾಗಿ ಕಂಬಿ ಕಿತ್ತದ್ದೂ ಉಂಟು!

ಇನ್ನು, ಮೊದಲನೆಯ ಸಾಲಲ್ಲಿ ಯಾರನ್ನು ಕೂರಿಸಬೇಕು, ಯಾರನ್ನು ಕೂರಿಸ ಬಾರದು—ಎಂಬುದು ಒಂದು ರಾವಣ ಸಮಸ್ಯೆ. ಇದರಿಂದ, ಯಾದವೀ ಕಲಹ ಕೂಡ ನಾಲ್ಕೈದು ಸಲ ನನ್ನ ಮುಂದೆ ನಡೆದಿದೆ. ಎಲ್ಲರಿಗೂ ಮುಂದಿನ ಸಾಲಲ್ಲಿ ಕುರ್ಚಿಗಳೇ ಬೇಕೆಂಬ ಹಟ! ಅಥವ, ಎಲ್ಲರಿಗೂ ಬೆಂಚೇ ಇರಲಿ, ಎಂಬ ವಾದ! ಅಲ್ಲದೆ, ಹಾರ ಹೊತ್ತವರ ಠೀವಿ, ಬಟನ್ ಹೋಲ್‌ನವರ ಜಂಭ, ಉಳಿದವರ ಕಹಿಮುಖ—ಇವು ನನ್ನನ್ನ ಪೇಚಿಗೆ ಸಿಕ್ಕಿಸಿವೆ.

ನಿಲ್ಲುವುದು ಯಾರು ಯಾರು, ಎಂಬ ವಾದ ಪ್ರತಿವಾದದ ಗೊಂದಲದ ನಡುವೆ, ಹತ್ತಾರು ಜನ ಪಲಾಯನ ಮಾಡಿದ ಪ್ರಸಂಗಗಳನ್ನೂ ನೋಡಿದೇನೆ. ನಗಬಹುದು ನೀವು, ಹೀಗೂ ಉಂಟೆ, ಸ್ವತಂತ್ರ ಭಾರತದಲ್ಲಿ, ಸಮತ್ವ ಸೋದರತ್ವ ಎಂಬ ಕೂಗಿನ ನೆರಳಲ್ಲಿ—ಎಂದು. ಉಂಟು ನಿಜ ಸಂಬಳ ಹೆಚ್ಚು ಬರುವವರು ಕೂರಲಿ, ಎಂದು ಕಾರ್ಯದರ್ಶಿ ಎಲ್ಲರೆದುರು ಅಂಗಲಾಚುತ್ತಾನೆ. ಸಂಬಳ ಯೋಗ್ಯತೆಯ ಗುರುತಲ್ಲ, ಎಂದು ಅಲ್ಲೇ ನನ್ನೆದುರಿಗೇ ಪ್ರತಿಭಟಿಸುತ್ತಾರೆ, ನಾಲ್ಕಾರು ಯುವಕರು! ವಯಸ್ಸು ಹೆಚ್ಚಿನವರು ಕೂರಲಿ, ಎಂದು ಆತ ಕೈ ಮುಗಿದರೆ, ಅದನ್ನೂ ಅವರು ಒಪ್ಪುವಂತಿಲ್ಲ. ನಂತರ ಹುಟ್ಟಿದ್ದು ನಮ್ಮ ತಪ್ಪೆ?—ಎಂದು ಕೇಳುತ್ತಾರೆ. ಅನಾರೋಗ್ಯದವರು ಕೂರಲಿ, ಎಂದು ಆತ ಬೇಡಿದರೆ, ಅಂಥವರ ಜಾಗ ಆಸ್ಪತ್ರೆ, ಎಂಬ ಸವಾಲು. ಚಂದಾ ಹಣ ಹೆಚ್ಚು ಕೊಟ್ಟವರು ಕೂರಲೇಬೇಕು, ಎಂದು ಆತ ಹಟ ಹಿಡಿದರೆ, "ಹಾಗಾದರೆ, ಮುಖ್ಯ ಅತಿಥಿಗಳು ಏನೂ ಕೊಡಲಿಲ್ಲ, ಅವರನ್ನು ಆಚೆಗೆ ನೂಕು" ಎಂಬ ಆರ್ಭಟ! ಗೋತ್ರ, ಧೋತ್ರ, ವಿದ್ಯಾ, ವಯಸ್ಸು, ಹಣ, ಗುಣ, ಯಾವ ಒಂದನ್ನೂ ಹಿಂದಿನ ಸಾಲಿನವರು ಗೌರವಿಸುವಂತಿಲ್ಲ. ಇಂಥ ಚರ್ಚೆ, ಮೊನ್ನೆ,

ಒಂದು ಶಾಲಾ ವಾರ್ಷಿಕೋತ್ಸವದ ಗ್ರೂಪ್ ಸನ್ನಿವೇಶದಲ್ಲಿ ನಡೆಯಿತು. ಕೊನೆಗೆ, ಅಲ್ಲೇ, ನನ್ನ ಸಮ್ಮುಖದಲ್ಲೇ, ಚೀಟಿ ಎತ್ತಿ, ಯಾರು ಯಾರು ಕೂರಬೇಕು, ಎಂಬ ಕಗ್ಗಂಟನ್ನು ಬಿಡಿಸಿ, ಪಾರಾದರು. ಆ ದಿನ, ಆ ಏರ್ಪಾಟನ್ನು ಎಲ್ಲರೂ ಮೆಚ್ಚಿದರು—ಒಬ್ಬರು ಹೊರತು. ಅವರು, ಪಾಪ, ಅಲ್ಲೇ ಅಳುತ್ತ ಕುಳಿತರು—ತಮ್ಮ ಅಂತಸ್ತಿಗೆ ತಕ್ಕ ಸೀಟ್ ದೊರೆಯಲಿಲ್ಲವೆಂದು.

ಮದುವೆ ಸಮಾರಂಭದಲ್ಲಿ, ಆರತಿ ಅಕ್ಷತೆಗಾಗಿ ಸತಿಪತಿಯರನ್ನು ಮಂಟಪದಲ್ಲಿ ಕೂರಿಸಿದಾಗ, ನನ್ನನ್ನು ಕರೆಯುತ್ತಾರೆ, ಅವರ ಫೋಟೋ ತೆಗಿ, ಎನ್ನುತ್ತ. ಆಗ ಆ ಗಂಡಸು, ಪಾಪ, "ಕೊಂಚ ಗೆಲುವಾಗಿರಪ್ಪ" ಎಂದು ಎಷ್ಟು ಕೇಳಿಕೊಂಡರೂ ಅಳುಮೋರೆ ಸಹಿತವಾಗಿಯೇ ಬೀಳುತ್ತಾನೆ. ಅವನ ಮುಖದಲ್ಲಿ ನಗೆಯ ಹೊಗೆ ಮಿನುಗುವಂತೆಯೇ ಇಲ್ಲ. ಆಫೀಸರುಗಳಿಗೆ ವರ್ಗವಾದಾಗ, ಅವರು ರಿಟೈರಾದಾಗ, ಉಪಚಾರಕ್ಕಾಗಿ ಸಿಬ್ಬಂದಿಯವರು ಗ್ರೂಪ್ ತೆಗೆಯಿಸುತ್ತಾರೆ. ಆಗ ನನ್ನ ಕಷ್ಟ ಇನ್ನೊಂದು ಬಗೆಯದು. ಆತನ ಮುಖದ ಕಡೆ ನಾನು ಗಮನವಿಡುವುದೇ ಇಲ್ಲ. ಆ ಸಿಬ್ಬಂಧಿಗಳ ಮುಖದ ಮೇಲೆ, ಕಿವಿಯಿಂದ ಕಿವಿವರೆಗೂ ಹರಡಿರುವ ಸಂತೋಷವನ್ನಡಗಿಸಿ, ಹದಮಾಡುವುದೇ ನನ್ನ ಕೆಲಸ.

ಬರೀ ಕ್ಲಿಕ್ ಎಂದರೆ ತೀರಿತು, ತಪ್ಪೆಲ್ಲ ಕೂತವರದೇ ಹೊರತು ನನ್ನದಲ್ಲ ಎಂದು ತಪ್ಪಿಸಿಕೊಂಡು ಬಿಡಬಹುದು—ಎಂದೆಲ್ಲ ನೀವು ನಮ್ಮ ವಿಷಯದಲ್ಲಿ ಹೇಳುತ್ತಿರುತ್ತೀರಿ. ಆದರೆ, ನಮ್ಮದೂ ಬಲು ತ್ರಾಸದ ಜೀವನ, ಸ್ವಾಮಿ.

—ಚೆನ್ನಸ್ವಾಮಿ.



ಪಂಚವಾರ್ಷಿಕ ಯೋಜನೆಗಾಗಿ ಬೆವರು ಸುರಿಸುತ್ತಿದ್ದಾರೆ!

ಕರುಣಾರಸ

ಮನುಷ್ಯನಾಗಿ ಹುಟ್ಟಿ ಸಂಸಾರಕ್ಕೆ ಬಿದ್ದಮೇಲೆ, ಕಲ್ಲಾಗಿರಬೇಕು ಕಠಿನ ಜಗದೊಳಗೆ....ಸಂದೇಹವೇ ಇಲ್ಲ, ಇದಕ್ಕೆ.

ಅನುಭವದ ಮಾತು, ಇದು. ನನ್ನ ಅನುಭವದ್ದು. ಹೋದ ತಿಂಗಳಿನದು....

ಚಕ್ರಬಂಧ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ೮೦೦೦ ನನಗೆ ದೊರೆತ ಸಮಾಚಾರ ನೀವು ಪತ್ರಿಕೆಯಲ್ಲಿ ಓದಿ, ಹೊಟ್ಟೆಕಿಚ್ಚು ಪಟ್ಟಿರಬೇಕಲ್ಲವೆ? ನನಗೆ ಅದು ಶನಿವಾರ ಸಂಜೆ ತಿಳಿಯಿತು. ಭಾನುವಾರವೆಲ್ಲ, ಅಷ್ಟು ಹಣವನ್ನು ಹೇಗೆ ಖರ್ಚುಮಾಡುವುದು, ಎಂದು ಗುಣಾಕಾರಮಾಡಿ ನೋಡಿದೆ. ಬಗೆಹರಿಯಲಿಲ್ಲ. ಅವಳು ಊರಲ್ಲಿದ್ದಿದ್ದರೆ, ಸುಲಭ ಆಗುತ್ತಿತ್ತು. ಅವಳಿರಲಿಲ್ಲ. ಇನ್ನು....ಅವಳು ಬರುವ ತನಕ ಸುಮ್ಮನಿರುವುದೇ ವಾಸಿ, ಎಂದು ಕೂತೆ.

ಭಾನುವಾರ ಕಳೆದು, ಸೋಮವಾರ ಟಪಾಲಿನವನು ಕಾಗದಗಳನ್ನು ತಂದ. ಶನಿವಾರವೇ ಪೇಪರಲ್ಲಿ ನನ್ನ ಫೋಟೊ ಹೆಸರು ವಿಳಾಸ ಬಂದಿತ್ತಲ್ಲ. ಆ ಕಾಗದ ಗಳಲ್ಲಿ ನನ್ನನ್ನ ಹೊಗಳಿ ನನ್ನಿಂದ ದಾನ ಪಡೆಯ ನೂರಾರು ಸಂಘ ಸಂಸ್ಥೆಗಳು ಅಂಗಲಾಚಿದ್ದುವು.

ಆದರೆ ಅವೊಂದಕ್ಕೂ ನಾನು ಜಗ್ಗಲಿಲ್ಲ. ಒಂದೇ ಒಂದು ಕಾಗದಕ್ಕೆ ಉತ್ತರ ಬರೆದೆ. ಆತ ನನ್ನ ಹೃದಯವನ್ನು ಕಲಕಿದ; ನನ್ನಲ್ಲಿ ಕರುಣೆಯನ್ನು ಉಕ್ಕಿಸಿದ. "ಸ್ವಾಮಿ! ತಮಗೆ ಬಂದಿರುವ ೮೦೦೦ ರೂ.ಗಳಲ್ಲಿ ನನ್ನ ೫ ರೂ. ಸೇರಿದೆ. ನಾನು ತೀರ ಬಡವ. ೮೦೦೦ ಸಿಗುತ್ತೆ ಎಂಬ ಆಸೆಯಿಂದ ಸಾಲ ತೆಗೆದು ಸ್ಪರ್ಧೆಗೆ ಕಳುಹಿ ಸಿದೆ. ದಯುವಿಟ್ಟು ಅದನ್ನು ನನಗೆ ರವಾನಿಸಿ, ಉಳಿದ ೭೯೯೫ನ್ನು ನೀವು ಮಹ ರಾಯರಾಗಿ ಉಪಯೋಗಿಸಿ" ಎಂದು ಬರೆದಿದ್ದ. ಪಾಪ! ಬಡಪಾಯಿ! ಸಾಲಿಗ! ೫ ರೂ. ಹೋದರೆ, ಏನು ಮಹಾ! ಲಾಭದಲ್ಲಿ ನಷ್ಟ ತಾನೆ—ಎಂದು, ಮನಿ ಆರ್ಡರ್ ಕಳುಹಿಸಿದೆ.

ಮಾರನೆಯವಾರ, ಆತನ ಹಾಗೆ ಬಡತನದಲ್ಲಿ ತೊಳಲಿ ಬಳಲುತ್ತಿದ್ದ ೨೦ ಜನ "ನಾವು ಕಳುಹಿಸಿದ ಹಣವನ್ನೇ ಅಲ್ಲವೇ ವ್ಯವಸ್ಥಾಪಕರು ನಮ್ಮಿಂದ ಕಸಿದು ನಿಮಗೆ ಕೊಟ್ಟಿರುವುದು .. ನಮ್ಮ ಮಕ್ಕಳು ಹಾಲಿಲ್ಲದೆ ಅಳುವಾಗ ನಿಮ್ಮ ಮಕ್ಕಳಿಗೆ ನೀವು ಕಾರ್ ಕೊಂಡುಕೊಳ್ಳುತ್ತೀರಾ? ಅದು ನಿಮಗೆ ಜೀರ್ಣವಾಗುತ್ತದೆಯೆ? ದುಡಿದು


ತಿಂದರೇನೇ ದಕ್ಕುವುದಿಲ್ಲ, ಇನ್ನು ಕಡಿದು ತಿಂದರೆ, ಧಕ್ಕುತ್ತದೆಯೆ?" ಎಂದೆಲ್ಲ ಬರೆದಿದ್ದರು. ಒಟ್ಟು ಆ ದಿನದ ಬೇಡಿಕೆ ೩೨ ರೂಪಾಯಿ. ಶನಿ, ಪೀಡೆ ತೊಲಗಲಿ ಎಂದು ಅದನ್ನೂ ಅವರವರಿಗೆ ಮನಿ ಆರ್ಡರ್ ಮಾಡಿದೆ.

ಈ ಸುದ್ದಿ ಹರಡಿತು, ಅಂತ ಕಾಣುತ್ತೆ. ಆದರಾಚೆವಾರ ೨೧೮ ಜನ ನನ್ನ ಎದುರು ಕೈ ನೀಡಿದರು, ಕಾಗದಗಳ ಮೂಲಕ. ಹೆಂಡತಿ ತಾಳಿ ಒತ್ತೆ ಇಟ್ಟು ಹಣ ಕಟ್ಟಿದೆವು, ಮಗು ಅಂಗಿ ಅಡವಿಟ್ಟು ಹಣ ಕಟ್ಟಿದೆವು, ತಾಯಿ ಕಂಬಳಿ ಮಾರಿ ಫೀಸ್ ಕಟ್ಟಿದೆವು, ಮಾಂಗಲ್ಯ ಉಳಿಸಿ, ಮಗು ಮೈ ನಡುಗುತ್ತಿದೆ, ತಾಯಿಗೆ ವಾಯು ಹಿಡಿದಿದೆ—ಎಂಬ ಗೋಳು ಕಥೆಗಳು. ನನ್ನದು ಮೃದು ಹೃದಯ;—ಅವತ್ತಿನ ಬೇಡಿಕೆ ೧೨೪೩ ರೂ. ಅವಷ್ಟನ್ನೂ ಮನಿ ಆರ್ಡರ್ ಮಾಡಿದೆ.

ಹೋದ ಶನಿವಾರ ೮೦೦೦ ರೂ. ಅಷ್ಟೂ ಖರ್ಚು. ಇನ್ನೂ, ಬೇಡಿಕೆಗಳು ಮಾತ್ರ ಡರ್ಜ ಗಟ್ಟಲೆ ಬರುತ್ತಲೇ ಇವೆ.

ಲೋಕದ ಕಣ್ಣೀರನ್ನು ಒರಸಲು ನಾನೆಲ್ಲಿಂದ ಸಾಲ ತರಲಿ? ಮೊದಲನೆಯ ಬಹುಮಾನ ಬಂದ ಯಾರಾದರೊಬ್ಬರು ನನಗೆ ಒಂದು ಸಾವಿರ ರೂ. ಸಾಲ ಕೊಡುತ್ತೀರಾ? ಮುಂದಿನ ಸಲ ನನಗೆ ಪ್ರೈಸ್ ಬರುತ್ತಲೂ ತೀರಿಸಿಬಿಡುತ್ತೇನೆ.

—ಕಾಮತ್.



ನಾನು ಬರೆದಿದ್ದನ್ನೇ ಕಾಪಿ ಮಾಡಿದರೂ ನಿನಗೆ ಬೇರೆ ಉತ್ತರ ಹೇಗೆ ಬಂತೋ!

ನೀವು ಸಭ್ಯರೆ?

[ಈ ಸಮಸ್ಯೆಯನ್ನು ನೀವು ನೀವೇ ನಿರ್ಧರಿಸಿಕೊಳ್ಳಲು ಈ ಕೆಳಗಿನ ಪ್ರಶ್ನಾವಳಿ ಬಹಳ ಸಹಾಯಕವಾಗುತ್ತದೆ. ಅಮೇರಿಕನ್ ನಮೂನೆಯಲ್ಲಿ ಇದನ್ನು ತಯಾರಿಸಲಾಗಿದೆ. ಆದ್ದರಿಂದ, ನಂಬಿಕೆಗೆ ತೀರ ಅರ್ಹ ಎಂದು ಹೇಳಬೇಕಾಗಿಯೇ ಇಲ್ಲ.]

೧. ಸಂಗೀತ ಕಚೇರಿ, ಭಜನೆ ಮಂದಿರ ಇತ್ಯಾದಿಗಳಿಗೆ ಹೋಗಿ ಹೊರಬರುವಾಗ ನೀವು, ನಿಮ್ಮ ಪಾದರಕ್ಷೆಗಳನ್ನು ಕಾಣದೆ ತತ್ತರಿಸಿ, ಬೇರೊಬ್ಬರ ಪಾದರಕ್ಷೆಗಳನ್ನು ಕಾಲಿಗೆ ತಗುಲಿಸಿಕೊಂಡು ಮನೆಗೆ ಬರುತ್ತೀರಾ? (ಹುಂ ೧೫. ಊಹುಂ ೨.)

೨. ಒಬ್ಬರೇ ರಸ್ತೆ ಮೇಲೆ ಹೋಗುತ್ತಿರುವಾಗ, ಎದುರಿಗೆ ನವೀನ ದಂಪತಿಗಳು ಸಿಕ್ಕಾಗ, ಅವರನ್ನು ಅಲಕ್ಷಿಸಿ, ಅತ್ತಲಾಗೆ ದಾಟುತ್ತಲೂ, ನೀವು ಹಿಂತಿರುಗಿ ನೋಡುತ್ತೀರಾ? (ಹುಂ ೨೦. ಊಹುಂ ೧೨.)

೩. ಬಸ್ ಪ್ರಯಾಣ ಮಾಡುವಾಗ, ಕಂಡಕ್ಟರ್ ನಿಮಗೆ ಬಾಕಿ ಎಂದು ಹೆಚ್ಚು ಚಿಲ್ರೆ ಕೊಟ್ಟಾಗ, ಯಾವುದೋ ಜ್ಞಾನದಲ್ಲಿ, ನೀವು ಇಡೀ ಅದನ್ನೆಲ್ಲ ಕಿಸೆಯೊಳಕ್ಕೆ ಸುರಿಯುತ್ತೀರಾ? (ಹುಂ ೧೬. ಊಹುಂ ೮.)

೪. ರೈಲು ಹತ್ತುವಾಗ, ನೀವು ಕಡೆಯ ನಿಮಿಷ ತನಕ ಹೊರಗೆ ನಿಂತಿದ್ದು, ಗಾರ್ಡು ಹಸುರು ಬಾವುಟ ಬೀಸಿದ ನಂತರ, ಓಡೋಡಿ ಬಂದು, ಲಾಗಾ ಹಾಕುತ್ತೀರಾ? (ಹುಂ ೩೨. ಊಹುಂ ೯.)

೫. ಡಿಲ್ಲಿ, ಬೊಂಬಾಯಿ, ಊಟಿ ಎಂದೆಲ್ಲ ನಿಮ್ಮ ಸುತ್ತಮುತ್ತಣ ಜನ ಮಾತಾಡುತ್ತಿರುವುದನ್ನು ಕೇಳಿದಾಗ, ಅಲ್ಲಿಗೆಲ್ಲ ಹೋಗದೆ ಇದ್ದರೂ, ಹೋಗಿ ಬಂದವರ ಹಾಗೆ ನೀವು ಬುರುಡೆ ಬಿಡುವುದುಂಟೆ? (ಹುಂ ೧೫. ಊಹುಂ ೪.)

೬. ಎಲಿಯಟ್ಟನ್ನು ಬಲ್ಲಿರಾ? ಕೊಲಿನೌಸ್ಕಿ, ಅಜೂಜುವಾ, ಪಿಸ್ಕಲಿನಿ, ಡ್ರಗಾಸಾಯೋಷಿಹಾಟಾ ಮುಂತಾದ ಪ್ರಗತಿಶೀಲ ಸಾಹಿತಿಗಳ ವಿಷಯ ಐದೈದು ನಿಮಿಷ ಭಾಷಣ ಮಾಡಬಲ್ಲಿರಾ, ಶಾಲಾ ಹುಡುಗರೆದುರು? (ಹುಂ ೬೦. ಊಹುಂ ೫.)

೭. "ಕಲೆಗಾಗಿ ಅಲ್ಲ ಕಲೆ", "ಪಂಚವಾರ್ಷಿಕ ಯೋಜನೆ", "ಸಂತಾನ ನಿರೋಧ" "ಸರ್ ರಿಯಲಿಜಂ" ಇವುಗಳನ್ನು ಕುರಿತು ಸರಳ ಸುಂದರ ಪ್ರಬಂಧವನ್ನು ಬರೆಯಬಲ್ಲಿರಾ? (ಹುಂ ೨೦. ಊಹುಂ ೧೪.)


೮. ಭಿಕ್ಷುಕರ ಸಮಸ್ಯೆಯನ್ನು ಸರ್ಕಾರವೇ ಪರಿಹರಿಸಬೇಕು, ಎಂದು ವಾದಿಸುತ್ತ, ಅವರಿಗೆ ಭಿಕ್ಷೆ ಹಾಕುವುದನ್ನು ನಿಲ್ಲಿಸಿದೀರಾ? (ಹುಂ ೩೦. ಊಹುಂ ೩.)

೯. ಕನ್ನಡ ಮಾಧ್ಯಮವೇ ನಮ್ಮ ದೇಶದ ಮಕ್ಕಳಿಗೆ ಅತ್ಯುತ್ತಮ ಎಂದು ಒತ್ತಿ ಒತ್ತಿ ಹೇಳುತ್ತಾ, ನಿಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳುಹಿಸಿ ಓದಿಸುತ್ತಿದೀರಾ? (ಹುಂ ೨೨. ಊಹುಂ ೩.)

೧೦. ಸಂಕಟ ಬಂದಾಗ ವೆಂಕಟರಮಣ ಎಂಬುದು ತಪ್ಪು; ಆದ್ದರಿಂದ, ಮೊದಲೇ ಒಬ್ಬರು ಭಾರಿ ಇಸಮ್ಮನ್ನು ಪತ್ತೆಹಚ್ಚಿ ಅವರ ಬಾಲ ಹಿಡಿದು ಜೀವನ ಪಥದಲ್ಲಿ ನಡೆಯುತ್ತಿದೀರಾ? (ಹುಂ ३೦. ಊಹುಂ ೫.)

ಈ ಪ್ರಶ್ನೆಗಳಿಗೆ ಹುಂ ಎಂಬ ಉತ್ತರ ಹೇಳುವಂತಿದ್ದರೆ, 'ಹುಂ'ಗಳ ಅಂಕಿಗಳನ್ನೆಲ್ಲ ಕೂಡಿಸಿ, 'ಊಹುಂ'ಗಳ ಅಂಕಿಗಳನ್ನು ಕಳೆದು, ಉಳಿದ ಸಂಖ್ಯೆ ೨೦೦ಕ್ಕಿಂತ ಹೆಚ್ಚು ಆದರೆ, ನೀವು ಉತ್ತಮ ಸಭ್ಯರು, ೧೫೦ ರಿಂದ ೨೦೦ ವರೆಗೆ ಮಧ್ಯಮ ಸಭ್ಯರು, ೧೦೦ ರಿಂದ ೧೫೦ರ ವರೆಗೆ ಆದರೆ . ನಾವೇನೂ ಹೇಳುವಂತೆಯೇ ಇಲ್ಲ.

—ರೇವಣ್ಣ.



ನನ್ನ ರಿಬ್ಬನ್ ಕೊಡ್ತೀಯೋ ಇಲ್ಲವೋ?
ಅದನ್ನ ಪುಸ್ತಕದಲ್ಲಿ ನವಿಲುಗರಿ ಇಟ್ಟಹಾಗೆ ಇಟ್ಟುಕೊಂಡಿದೇನೇಕಣೆ! ಹೇಗೆ ಕೊಡಲೇ!


ನೂರೆರಡು

ಕೆಂಡದ ಕುಂಡದಂಥ ಹಗಲು
ಹುರಿಯುವ ಬಾಣ್ಲೆಯಂಥ ಮುಗಿಲು
ಬೇಯುವ ರೊಟ್ಟಿಯಂಥ ಬಯಲು
ಅಲ್ಲು ಇಲ್ಲು ಎಲ್ಲೆಲ್ಲು ಬರಿಯ ಬಿಸಿಲು, ಬಿಸಿಲು, ಬಿಸಿಲು !

ಹಕ್ಕಿಯ ಕೊರಳ ಬೆಂಕಿಯುರುಳು
ಮರಮರ ಮೌನ, ಕೆಂಡ ಮರಳು
ಸೀದೊಲು ಅಲ್ಲು ಇಲ್ಲು ನೆರಳು
ಅಲ್ಲು ಇಲ್ಲು ಎಲ್ಲೆಲ್ಲು ಬರಿಯ ಬಿಸಿಲು ಬಿಸಿಲು ಬಿಸಿಲು !

ಬಿಸಿಲು ಬಿಸಿಲು ಬಿಸಿಲು
ನೂರೆರಡು ಡಿಗ್ರಿ ಬಿಸಿಲು
ತಲೆಯ ಚಿಪ್ಪಿನಲಿ ಮೆದುಳು ಕರಗಿ ನೀ
ರಾಗುವಂಥ ಬಿಸಿಲು !
ದಾರಿದ್ರ್ಯದಂಥ ಬಿಸಿಲು
ಅಲ್ಲು ಇಲ್ಲು ಎಲ್ಲೆಲ್ಲು ಬರಿಯ ಬಿಸಿಲು ಬಿಸಿಲು ಬಿಸಿಲೂ !!

—ದಿಬ್ಬಯ್ಯ.



ಜುರಾಶಿಪಟ್ಟು ತಳನೆಕ್ಕ್ತಾ ಕೂತರೆ, ತಿಂದದ್ದೆಲ್ಲಾ ಕಕ್ಕಸ್ತಾರೆ! ಬೇಗಬಾ ಹೊರಗೆ

ಬಡ್ಜೆಟನ್ ಮೋಲಿತ್ರಿ

ಸಮುದ್ರಗತವಾದ ಮೊದಲನೆಯ ಧೂಮಕೇತು ವಿಮಾನದಲ್ಲೇ ನಾನಿದ್ದೆ, (ಅದರ ಹೆಸರೇನೋ! ಮರೆತೇ ಹೋಯಿತು) ಆದರೂ ನಾನು ಸಾಯಲಿಲ್ಲ. ವಿಮಾನ ಮದಿಸಿದ ಕೋಣನಂತೆ ಢಾಂ! ಎಂದು ಕೂಗಿತು. ಪದಚ್ಯುತನಾದ ಫ್ರಾನ್ಸ್ ಮಂತ್ರಿಯಂತೆ ನಾನು ಆಕಾಶದಿಂದ ಕೆಳಕ್ಕೆ ಬಿದ್ದೆ; ಕೆಳಗೆ ಅಪಾರಸಾಗರ; ನವ್ಯಕಾವ್ಯ ಬರೆಯಲು ದೃಶ್ಯಪ್ರಚೋದಕವಾಗಿತ್ತು.

'ಹಾರಿ ಹೋಯಿತು ಜೀವ; ಪ್ಯಾರೇ ನೌಲಾಬುಲಾ'.

ಎಂಬ ಸಾಲು ತಲೆಯಲ್ಲಿ ಹೊಳೆಯಿತು. ಅಷ್ಟರಲ್ಲಿ ಸಮುದ್ರಕ್ಕೆ ಬಿದ್ದೆ. ಸಾಗರದ ಕೆಳಗಡೆ.

a million million ತಿಮಿ ತಿಮಿಂಗಿಲಾಸ್

all of them a ಫೈಟಿಂಗ್

ಎಂಬ ಮೂರುಸಾಲುಗಳನ್ನು ಕಟ್ಟಿದೆ.

ಪಾಪಚ್ಚಿಯಂತೆ ಕೆಳಕ್ಕೆ ಬೀಳುತ್ತಲೇ ಇದ್ದೆ. ನೀರಿನ ತಳದಲ್ಲಿ ಸುತಳವೋ ಪಾತಾಳವೋ ಸಿಕ್ಕಿತು. ಅಲ್ಲಿ ನಾಗಕನ್ನಿಕೆಯರೂ ಇಲ್ಲ ಆದಿಶೇಷ, ಕಪಿಲ, ಅಷ್ಟ ದಿಗ್ಗಜ ಯಾರೂ, ಇರಲಿಲ್ಲ. ಅರ್ಜುನನ ಹಾಗೆ ದಕ್ಷಿಣ ಅಮೆರಿಕಕ್ಕೆ ಹೋಗಿದ್ದೆನೋ ಏನೋ.

"ಪಾತಾಳದೇಶಂ ತಾಳಿಕಟ್ಟಲು ಕೂಲಿ"—ಮತ್ತೆ ನವ್ಯಕಾವ್ಯ! ಪಾತಾಳದಲ್ಲಿ ಅಸೆಂಬ್ಲಿ ಭರ್ಜರಿಯಾಗಿ ನಡೆಯುತ್ತಿತ್ತು; ಬಡ್ಜೆಟ್‌ಸೆರ್ಷ. ಹಿಟ್ಲರ್, ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್‌ಸನ್ ಮತ್ತು ಓಬೀರಾಯ ಎಂಬ ಸೆಕ್ರೆಟ್ರಿಗಳ ಸಹಾಯದಿಂದ ತಯಾರಾದ ಬಡ್ಜೆಟ್ಟನ್ನು ಮಂತ್ರಿ ಧೃತರಾಷ್ಟ್ರ ಮಂಡಿಸುತ್ತಿದ್ದ. ೧೩ ನಿಖರ್ವ ದೀನಾರಗಳ ಡಿಫಿಸಿಟ್ ಬಂದಿತ್ತು. ರಾಮಾಯಣ ಪಠಣೆ; ದನಮಹೋತ್ಸವ, ಗರುಡಪುರಾಣ ಪ್ರಚಾರ; ತೆಪ್ಪೋತ್ಸವ ನಡೆಸಲು ಹಣ ಬಹಳ ಬೇಕಾಗಿತ್ತು.

ಆದ್ದರಿಂದ ಹಲ್ಲುಕರ, ಹುಲ್ಲಿನ ತೆರಿಗೆ; ಕೂದಲು ಬೆಳೆಸುವುದರ ಮೇಲೆ ಸೂಪರ್ ಇರಿಗೇರ್ಷ ಟ್ಯಾಕ್ಸ್; ಹೊಗೆ ಸುಂಕ; ಗಾಳಿಗೋಪುರಗಳ ಸೇಲ್‌ಟ್ಯಾಕ್ಸ್‌ಗಳನ್ನು ಹಾಕಿದಮೇಲೂ ೩ ನಿಖರ್ವಗಳ ಡಿಫಿಸಿಟ್ ಉಳಿಯುತ್ತಿತ್ತು ಸಂಭಾಷಣೆ

ತೆರಿಗೆ; ಭಾಷಣಕರರಗಳೆರಡೂ ಎಷ್ಟೋ ಮೊದಲಿನಿಂದಲೂ ಜಾರಿಯಲ್ಲಿದ್ದುದರಿಂದ, ವಿರೋಧಿಪಕ್ಷ, ಸರ್ಕಾರಿವಲಯಗಳೆರಡೂ ಮೌನದಿಂದಿದ್ದವು. ನಾನು ಹೋಗಿ ಇದೇನು? ಎಂದು ಸನ್ನೆಮಾಡಿದೆ. ನೀನು ಭೂಲೋಕದವ ಇತರರು ಪಾತಾಳದಲ್ಲಿರುವ ಹಜನ ಮಾತನಾಡಿದಮೇಲೆ ನಿನ್ನ ಸರದಿ ಎಂದು ಬರೆದು ತೋರಿಸಿದರು. ಕಾದೆ; ಸರದಿ ಬಂತು.


ಉಗುಳಿನ ಮೇಲೆ ಸುಂಕ; ಉಸಿರಾಟದ ಸರ್‌ಛಾರ್ಜ್; ಪ್ರ. ಶಿ. ಕಾ ಒಂದಕ್ಕೆ ೧೦೦೦೦ ದೀನಾರದಂಡ; ಒಂದು ಸಾಲು ನವ್ಯಕಾವ್ಯಕ್ಕೆ ೧೦೦ ದೀನಾರ ಎಂಟರ್‌ಟೈನ್ ಮೆಂಟ್ ಟ್ಯಾಕ್ಸ್; ದೋಸೆ ತೂತುಗಳ ಮೇಲೆ ತೆರಿಗೆ, ಇತ್ಯಾದಿಗಳಿಂದ ಖೋತಾಕೊನೆಗೊಂಡು ಉಳಿತಾಯವಾಗುವುದೆಂದು ಅವರಿಗೆ ಸಕಾರಣವಾಗಿ ವಿವರಿಸಿದೆ. ನನ್ನನ್ನು ಫೈನಾನ್ಸ್ ಮಂತ್ರಿಪದವಿಗೇರಿಸಿದರು. ಆದರ ಭಾರದಿಂದ ಮೇಲಕ್ಕೇಳಲು ಆಗಿಲ್ಲ. ನವ್ಯಕಾವ್ಯ ಬರೆಯುವುದು ನಿಂತುಹೋಗಿದೆ. ಆದರೂ ಸುಂದರ ವಸುಂಧರೆಯ ಮಡಿಲಿನಲ್ಲಿರುವ ಕರುನಾಡನ್ನು ನೆನೆದಾಗ

ಮನಕುಲವೆ ಮೀಟು ತಂತಿಯ! ಓದಿವ್ಯ
ಬಡ್ಜೆಟಿನ್ ಮೇಲೆತ್ತಿ; ದಿಟಂ ಲೋಕಪೂಜ್ಯಂ

ಎಂಬ ಸಾಲುಗಳು ತಲೆಯಲ್ಲಿ ಗುಣ ಗುಣಿಸುತ್ತಿವೆ.

—ಅ. ರಾ. ಸೇ.

—— o ——



"ಅಪ್ಪಾ... ಮ_ದ_ಗ ಜ_ಗ_ಮ_ನೆ ಅಂದ್ರೇನಪ್ಪಾ . ....?"

ಬಿ. ಎಸ್. ಸಿ. ಮಗನನ್ನು ಕುರಿತು

ಯಾವ ಪದವಿ ಶಿಲ್ಪಿ ನಿನಗೆ
ಡಿಗ್ರಿ ಹಿಡಿಸಿದ?

ಯಾವ ಪ್ರಿನ್ಸಿಪಾಲ ನಿಂತು
ಜಗಕೆ ಕೊಡಿಸಿದ?

ನೋಟು ರಾಶಿ ತಿನಿಸಿ ಹೀಗೆ
ನಿನ್ನ ಕೆಡಿಸಿದ?

ಸೂಟು ತೊಡಿಸಿ ಮೂರುವರ್ಷ
ಬರಿದೆ ದುಡಿಸಿದ?


ದುಡಿಮೆ ಹೊಲಸು ಎನುತ ನಿನ್ನ
ಊರು ಬಿಡಿಸಿದ?

ನಮ್ಮದೆಲ್ಲ ಸುಳ್ಳು ಎಂದು
ಏನೊ ಬಡಿಸಿದ?

ಕರಿಯ ಗೌನು ಹಳದಿ ಚೀಲ
ನಿನಗೆ ತೊಡಿಸಿದ?

ಬರಿಯ ಖಾಲಿ ಹೆಮ್ಮೆಯನ್ನು
ತುಂಬ ಕುಡಿಸಿದ?

—ರುದ್ರಮ್ಮ



ನವ್ಯಕಾವ್ಯಕ್ಕಿಂತ ಕಠಿನ

(ನವ್ಯಗದ್ಯ)—೧ "ಆರಾತ್ರಿ"

ಅನೀಮಿಯಾ ಚಂದ್ರ, ಕರೀ ಸೀರೆ, ಸಿನಿಮ ತಾರೆ, ಪ್ಲೇ ಬ್ಯಾಕುಗಳ ಸಹಿತ ಮಾರ್ಗಶಿರವನೊಡ್ಡಿ, ದೊಡ್ಡಕರಡಿ, ಹದಕರಡಿ, ಸಣ್ಣಕರಡಿಗಳನ್ನೆಲ್ಲ ತಪಸ್ಸು ಮಾಡುವ ಧ್ರುವನಲ್ಲಿಗೆ ನಿಯಂತ್ರಿಸಿದ. ಪೋಲೀಸರ ಮಾನಾಪಹರಣಕ್ಕಾಗಿ ಹೂದಿನಿ ಶಾಕಿನಿ ಡಾಕಿನಿಗಳು ಕೀಬಂಚಕರು, ನೀಲಿ ಗಡ್ಡದವರು, ಅಂಗುಲೀ ಮಾಲರು, ಹೊಸ್ತಿಲ ಕರೀಕೋಣಗಳ ಬೆನ್ನು ತುಳಿದು ಜೈ ಎಂದರು. ಕಿಂ ಕರ್ತವ್ಯಂ, ಕಿಮ ಕರ್ತವ್ಯಂ! ಕಾಕ್ಸ್‌ಟೌನಿನ ಗಂಡುಗಲಿಗಳ ರೋದನ ಗಗನವೇದಾನಾ! ಪಾಂಡು ವೃತ್ಯ್ಯ, ಕೀಚಕ ನೀಚಕ, ಅಂತೋಣಿ ಶೋಷಣ, ಯಾರಂಕುಶ ಮಿಟ್ಟೊಡಂ ನೆನೆವುದವರ ಮನಂ ಕಬರೀ ಭಾರಭ್ರಮರೀಂ.

ಸಭ್ಯತಾಲತೆ ಹುಳುತು ಖಾಂಡವನ್ನತ್ಯಗ್ರೈವ ಮಹಾಧಾತ್ರಿ! ನಮಸ್ತುಂಗ ಶಿರಶ್ಚುಂಬಿ ತೇನ್‌ಸಿಂಗನೋಪಾಧಿ ಅಸಹ್ಯ ಹಿಮವಂತನಿಗೂ ಅಳವಡದ ಕಳವಳ ಹರಿತವಾದಂತಿದೆ ನುರಿತ ನಾತಾವರಣದಿ. ತ್ರಿದಿಮೂಗಿನಲಿ ಬಿಳುಪೇನು? ಬಡಿಯಂ ಕಾಣದೆ ಪಾಲಂ ಕುಡಿದೆಯಾ? ರಂಗ ಕೊರಳನೂದಲಾಗಿ ಶಿಂಗನೂ ಕಾಳಿಂಗ ನೇರಿದೆಯಾ? ಸಾಕು! ಧಾಕೂ? ರಾ ಎಂದ ಮೇಲೆ ಪ್ರೀತಿಯಾದರೂ ಬರಲೇಬೇಕು. ಲಲಾಟದೊಡನೆ ಲಲ್ಲಾಟವೆ? ಹುಳುಮನುವಿಗೆ ಜ? ನೀರೊಳಗಿರ್ದುಂ ಏಕೆ ನೆಗಡಿ ಬಂದುದೋ? ನೀನರಿಯೆಯಾ? ನಾನೂ ಅರಿಯೆ.

(ನವ್ಯಗದ್ಯ)—೨ "ಚುನಾವಣೆ"

ಬೂತದಯಾಪರ! ಎಡಗೈ ಹೆಬ್ಬೆಟ್ಟು ಬಣ್ಣದ ಚುಕ್ಕಿ ಹಿಂಕಿಲಾಬಿಸಿ ಸಭ್ಯತಾಲತೆ ಹೂತು ಗೊಬ್ಬರವಾಗಿ ಸ್ವರ್ಗಕ್ಕೆ ಕುಚ್ಚು ಹೆಚ್ಚಿಂದ ಸರ್ವಜ್ಞ. ಭಂಡವಾಳ ಭಿಂಡಿವಾಲ ತ್ರಿಶೂಲ ಮುಸಲ ಪುಷ್ಕರ ನೃತ್ಯ ಭೃತ್ಯರ ಟಾಂಡನ! ಪ್ರಜಾಪತಿ! ನೀನೇ ಶರಣು. ಮಾನವ ದಾನವ ಎಲೆಗೆ ಹಸುರು ಸವರಿ ಹೂವಿಗೆ ಕುರಿಮಳ ಸವರಿ, ಸವರನ್ನನು ವೃಷ್ಟಿಸಿ ಮೃದು ಪೂಂಗಿಯನೂದಿ ಬೆಳಗಿಸಿದ ಬೆಳಗಿನಿಂದಲೂ—ಇದು ಬರಿ ಬೆಳಗಲ್ಲೋ, ಮೂಳಗಲ್ಲೋ, ಮುಳುಗು ಇದು, ಮೂಳೆ ಮೂಳೆಗೂ ಮೂಳಿಗೆಯ ಕೆಳ ಮುಳುಗು. ಇಚ್ಛೋಡನ್ನು ತಾಲಲ್ಲಿ ಸುತ್ತಿ ಪಲ್‌ಕಿಂದು ನವನೀತ

ಕ್ರಿಯೆಯಂ ಮಾಡಿ ನುಸುಳಿ ನುಚ್ಚಿನುಂಡೆ ಮಾಡಿ ವಚನರಚನೆ ಪಚನ ಕುಶಲತೆ, ಆಹ! ಊಹಿ! ಅದೆಂತುಟು ಭಯಂಕರಂ. ಮೆರವಣಿಗೆ ಬೇರೆ, ಬಣ್ಣದ ಈಸಣಿಕೆ ಗಳಿಗೆ! ಆ ಪಕ್ಷ ಈ ಪಕ್ಷ ಆ ಈ ಎನಿಯಮ ಪಕ್ಷಿಗಳಿಗೆಲ್ಲಿವೆ ಗೂಡು, ತುತ್ತತುದಿಯ ಮರದ ಯೋಂಪು, ವಂಶವೃಕ್ಷದ ಬೇರು ಎತ್ತ ತಿರುಗಿ ಎತ್ತ ಹರಿದು ಯಾರ ಕ್ರೀಡೆಯ ಮುರಿಯಿತೊ? ಹಾ ಹಾ ಹೂ ಹೂ ಗಂಧರ್ವ ಲೋಕ ಇಳೆಗಿಳಿದು ಭಗೀರಥದ ಕುದುರೆ ಲಗಾಮನ್ನು ಕಟಕಟನೆ ಲಟಲಟಿಸಿ, ಕೇಳಿಸುತ್ತಿದೆ ಹೇಷಾರವ ಹೀರೋಷಿ ಮದಿಂದ. ತಾಳ ಟೊಮಾಟೊ ಭಂಡೆ ಮುದ್ದಳೆ ಅಂಟೆಗಿಂತಲೂ ನಂಟು ಚಚ್ಚ್ಯಾಕ ಪೆಟ್ಟಿಗೆ ಗೂದ್ರೆಜನ ತಯಾರಿಕೆ ಗೋದಾವರಿಯ ಮರಳಿನಲ್ಲಿ ತುರುಕಿದ ಕದ್ದ ಕಾಗದ, ಎಣಿಸೋ ಗುಣಿಸೋ, ಗೋಡಂಬಿ ಗೂನು ಗೋಪೀ ಜನ ಪ್ರಿಯ, ಆಗ ಹೊರಬರಲಿ ಗೋಸುಂಬಿ ಬಣ್ಣ, ಮಾಕ್ಷಾದಿ ಪಾಕ, ಡೋಬಿಟನ್‌ನ ಬಣ್ಣ, ನವದಿಲ್ಲಿ ದಶದಿಲ್ಲಿ ಜಾಂಬವಂತನ ಜಂಬ, ಅಲಕ್ ನಿರಂಜನ, ಜನಮನ ಭಂಜನ, ಅಲ್ಲಿವರೆಗೆ ಇಗೋ ಜಲ್ಪವಿರಾಮ.

—ಪಾಟೀಳಿ.



ಅಲೋ.... ಯಾರು... ಹೆಡ್ಮಾಸ್ತ್ರೇ

ನನ್ಮಗ ಕಿಟ್ಟ... ತಲೆಗೆ ಪೆಟ್ಟುಬಿದ್ದು ನರಳ್ತಾ ಇದಾನೆ... ಈದಿನ ರಜಕೊಡಬೇಕು ..

ಗಂಡು ಗಲಿಗಳು

(ಕಿರು ನಾಟಕ)

ಪಾತ್ರಗಳು:—

೧. ಅನಂತಯ್ಯ:—“ಇಂದಾಗೆ” ಗುಮಾಸ್ತೆ ಅಪರೂಪದ ಗಂಡು ಕೂಸಿನ ನಾಮಕರಣದಲ್ಲಿ ಓಡಾಡುತ್ತಿದ್ದಾನೆ.

೨. ಕೋದಂಡ }
೩. ಕಾಮಾಕ್ಷಿ } ಗಂಡ ಹೆಂಡಿರು. ಅನಂತಯ್ಯನ ಮನೆ ವಠಾರದಲ್ಲಿರುವವರು. ಹೆಂಡತಿ ನಾಮಕರಣದಲ್ಲಿ ಭಾಗವಹಿಸಿ ಗಂಡ ಅನ್ನಲಾರದೆ ಅನುಭವಿಸುತ್ತಿದ್ದಾನೆ.

೪. ಪಂಚಾಕ್ಷರಯ್ಯ }
೫. ರುದ್ರಮ್ಮ } Do

೬. ಲಿಂಗಮೂರ್ತಿ }
೭. ಪಾರ್ವತಮ್ಮ } Do

೮. ಚಕ್ರಪಾಣಿ: ಅನಂತಯ್ಯ ಮತ್ತಿತರರ ಮಿತ್ರ.

೯. ವಾಲಗದವ

ಸ್ಥಳ:-ಅನಂತಯ್ಯನ ಮನೆ ವಠಾರ. ಅಜುಬಾಜು ಕಾಣಬರುವ ಚಿಕ್ಕಮನೆಗಳ ಜಗುಲಿ.

[ಆಲ್ ಇಂಡಿಯ ರೇಡಿಯೋ ಮೈಸೂರು ಕೇಂದ್ರದ ಕೃಪೆಯಿಂದ]

[ಅನಂತಯ್ಯನ ಮನೆಮುಂದೆ-ವಾಲಗ ನಡೆಯುತ್ತಿದೆ. ಮಗನ ನಾಮಕರಣ ಪಕ್ಕದಮನೆಯೇ ಕೋದಂಡನದು, ಈಕಡೆ ಪಕ್ಕದ್ದು ಲಿಂಗಮೂರ್ತಿ. ಎದುರು ಮನೆಯೇ ಪಂಚಾಕ್ಷರಿದು. ಅದರ ಪಕ್ಕದ್ದು ಚಕ್ರಪಾಣಿದು. ಒಬ್ಬರಿಗೊಬ್ಬರು ಅನ್ಯೋನ್ಯ ಕಲಹ ಕುತೂಹಲ ಕುಕೃತ್ಯ ಕುಟಿಕೆಗಳೊಡನೆ ನೆರೆಹೊಕ್ಕಿಗಳಾಗಿ ನೆರೆಗೆ ಹೊರೆಯಾಗಿ ಅವರವರ ಸಂಸಾರವನ್ನು ಸಾಗಿಸುತ್ತಿದ್ದಾರೆ. ಈ ಇವರ ಅರ್ಧಾಂಗಿಯರೂ ಅನಂತಯ್ಯನ ಮನೆ ನಾಮಕರಣಕ್ಕೆ ತೆರಳಿ ಭಾಗವಹಿಸುತ್ತಿದ್ದಾರೆ. ಕೋದಂಡ ತನ್ನ ಮನೆಮುಂದೆ ನಿಂತು ಅನಂತಯ್ಯನ ಮನೆಗೆ ಹೊರಟ ಅರ್ಧಾಂಗಿ ಕಾಮಾಕ್ಷಿಯೊಡನೆ ಮಾತಾಡುತ್ತಿದ್ದ.]

ಕೋದಂಡ—ಓ ಹೊ ಹೋ - ಧರ್ಮಾವರದ ಸೀರೆ, ಸುಗಂಧರಾಜನ ಹೂವು ಹೆರಳಿಗೆ ಏನು ಸಂಭ್ರಮ-ಏನು ಅಲಂಕಾರ-ಅಮ್ಮಾವ್ರವರು ಹೊರಟಿದ್ದು ಎಲ್ಲಿಗೋ ಅರ್ಥವಾಗಲಿಲ್ಲ

ಕಾಮಾಕ್ಷಿ—ಗೊತ್ತಿದ್ದು ಕೂಡಾ ಕೇಳಿದರೆ ನನಗೆ ರೇಗೋದು ನೋಡಿ—ಅನಂತಯ್ಯ ನೋರು ಮನೇಲಿ ನಾಮಕರಣಾಂತ ಅಲ್ಲಿ ಆಗ್ಲಾ ಇರೋ ವಾಲಗವೇ ಹೇಳೋಲ್ಲವೇ ?

ಕೋದಂಡ—ಅದಕ್ಕೇಕೆ ತಮ್ಮ ಸವಾರಿ ಇಷ್ಟು ಬೇಗ ಅಲ್ಲಿಗೆ ಹೊರಟಿದ್ದೂ ಅರ್ಥ ವಾಗಲಿಲ್ಲ.

ಕಾಮಾಕ್ಷಿ—(ರೇಗಿ) ನಿಮಗೇನು ಅರ್ಥವಾಗುತ್ತೆ ಹೇಳಿ, ಪಾಪ ಅನಂತಯ್ಯನ ಅರ್ಧಾಂಗಿ ಸುಬ್ಬಮ್ಮನಿಗೆ ಸಹಾಯವಾಗೂಕೆ ನಾನೂ ಹೋಗಬೇಡವೇ— ಒಲೆ ಮೇಲೆ ಹಾಲಿದೆ, ತೊಟ್ಲಲ್ಲಿ ಕೂಸು ಮಲಗಿದೆ, ಹುಷಾರು— ಅಂ ನಾ ಹೋಗಿ ಬರುತ್ತೇನೆ, ಮನೆ ಕಡೆ ಜೋಕೆ (ಎಂದು ಹೇಳುತ್ತಾ ಹೊರಡುವಳು.)

ಕೋದಂಡ—ಶ್ರೀ ರಾಮ ರಕ್ಷೆ—ಸಧ್ಯ ನೀನು ಹೋಗು—ನಾನು ನೋಡ್ಕೋತೀನಿ —ಅಬ್ಬ ಮಳೆ ಬಂದು ನಿಂತಹಾಗಾಯ್ತು. ಈ ಮಹಾರಾಯತಿ ಹೊರಟು ಹೋಗಿದ್ದು—ಹೂಂ ಇನ್ನೇನು ಮಾಡ್ಲೀ ಬೇಜಾರು........ಅರೆ ಅದ್ಯಾರು ಪಕ್ಕದ ಮನೆ ಜಗಲಿ ಮೇಲೆ ನಿಂತಿರೋರು ? ಓ ಹೊ ಹೊ ಪಂಚಾಕ್ಷರಯ್ಯ— ಏನು ಪಂಚಾಕ್ಷರಯ್ಯನೋರೆ ಹಾಗೆ ಪಾಣಿ ಪಂಚೆಧಾರಿಗಳಾಗಿ ಚಿಂತಾಕ್ರಾಂತ ರಾಗಿ ನಿಂತಿದ್ದೀರಲ್ಲಾ.

ಪಂಚಾಕ್ಷರಿ—ಸಾಕು ಕಣಯ್ಯ ಕೋದಂಡ ನಿನ್ನ ಬಹುವಚನ—ಬಾ ನನಗೂ ಬೇಜಾರಾಗಿತ್ತು, ಯಾರೂ ಬೋರು ಮಾಡೋರೆ ಇಲ್ಲವಲ್ಲಾಂತ—ಬಾ.

ಕೋದಂಡ—ಬೇಜಾರು ಅಂತ್ಲೆ ನಾನು ನಿನ್ನ ನೋಡಿ ಬಂದಿದ್ದು—ನಿನಗ್ಯಾಕೆ ಬೇಜಾರು ಮನೆಲ್ಯಾರು ಇಲ್ವೆ.

ಪಂಚಾಕ್ಷರಿ—ಆ ಅನಂತಯ್ಯನಿಗೆ ಒಂದು ಗಂಡು ಮಗುವಾಗಿದ್ದು ಇಡೀ ವಠಾರಾನೆ ಅಲ್ಲೋಲ ಕಲ್ಲೋಲವಾಗಿದೆ ನೋಡು. ಉಪ್ಪಿಟ್ಟು ಮಾಡೇ ಅಂತ ಬಡು ಕೊಂಡೆ ಕೇಳದೇನೆ ಹೋಗಿದ್ದಾಳೆ ನೋಡು ಅನಂತು ಮಗನ ನಾಮಕರಣಕ್ಕೆ.

ಕೋದಂಡ—ಇಬ್ಬರೂ ಒಂದೇ ದೋಣೀಲಿ ಪ್ರಯಾಣ ಮಾಡ್ತಾ ಇದ್ದೀವಯ್ಯಾ —ನಮ್ಮ ಇವಳೂ ಅಲ್ಲಿಗೇ ಹೋದಳು.

ಪಂಚಾಕ್ಷರಿ—ಹ ಹ ಹ....ಹಾಗೇ ಹೇಳು. ಅರೆ! ಅತ್ತಕಡೆ ನೋಡಯ್ಯಾ, ಚಕ್ರಪಾಣಿ, ಲಿಂಗಮೂರ್ತಿ ಈ ಕಡೇನೆ ಬರ್ತಿದ್ದಾರೇ.

ಕೋದಂಡ—ಬನ್ನಿರೋ ಮಹಾನುಭಾವರಾ ಬನ್ನಿ ನಿಮ್ಮ ಮುಖಕ್ಕೆ ಮಂಗಳಾರತಿ.

ಚಕ್ರಪಾಣಿ—ಅದ್ಯಾಕೋ ಏನು ಕಂಡದ್ದು ನಮ್ಮ ಮುಖದಲ್ಲಿ ನೀನು.

ಕೋದಂಡ—ಬೇಸ್ತು ಬಿದ್ದ ಖಳೆ ಮುಖದ ಮೇಲೆ—ನಿಮ್ಮಗಳ ಅರ್ಧಾಂಗಿಯರೂ ಅನಂತಯ್ಯನ ಮನೆ ನಾಮಕರಣಕ್ಕೆ ಹೋದರಲ್ಲವೇ? ನಿಮಗೆ ಬೇಜಾರಾಗಿ ಪರದೇಶಿಗಳ ಹಾಗೆ ಈ ಕಡೆ ಕಾಲೆಳೆದುಕೊಂಡು ಬಂದದ್ದು ಸುಳ್ಳೆ?

ಲಿಂಗಮೂರ್ತಿ—ಮೆಚ್ಚಿದೆನು ಮಗನೆ ನಿನ್ನಯ ಊಹೆಗೆ—ಭೇಷ್ ಮನೋಶಾಸ್ತ್ರ ಪಂಡಿತ ಕೋದಂಡರಾಯ ಶಹಬ್ಬಾಶ್.

ಪಂಚಾಕ್ಷರಿ—ಲಿಂಗಮೂರ್ತಿ ನಿನ್ನ ಕವಿತೆ ಹಾಗಿರಲಿ—ಅಲ್ಲಿ ನೋಡು ಕೊಂಚ ಅನಂತಯ್ಯನ ಮನೆ ಕಡೆ. ಅವನ ಓಡಾಟ, ಅವನ ಸಂಭ್ರಮ, ವಾಲಗ ಭಜಂತ್ರಿ ಓ ಹೊ ಹೊ ಹೊ—ಏನು ಮೆರೆತ ಅವನದೂಂತಿನಿ.

ಕೋದಂಡ—ಅವನ ಜರಿ ಶಲ್ಯ ನೋಡಿ, ಹಾಕಿರೋ ಹತ್ತ ಖಡಕಿನ ಫಳಫಳ ತ್ಕಾರ, ರೇಷ್ಮೆ ಮಡಿಯನ್ನು ಉಟ್ಟಿರೋ ವರಸೆ, ಷೋಕಿ ಆಳು ಕಣ್ರೋ ಅನಂತಯ್ಯ.

ಚಕ್ರಪಾಣಿ—ಸ್ವಲ್ಪ ಮಾತು ಕಡಿಮೆ ಮಾಡಬಾರದೆ ಮಾರಾಯರುಗಳಿರಾ ವಟ ವಟ ವಟಾಂತ ವದರ್‍ತಾ ಇದ್ದೀರಾ. ಅಲ್ನೋಡಿ ಅನಂತಯ್ಯಾ ಆ ವಾಲಗ ದವನ ಹತ್ತಿರ ಏನೋ ಜೋರು ಮಾಡ್ತಾ ಇದ್ದಾನೆ, ಹಾಗೆ ಕೊಂಚ ಆಲಿಸಿ ...

(ಅನಂತಯ್ಯ ತನ್ನ ಮನೆಮುಂದೆ ವಾಲಗದವನ ಹತ್ತಿರ)

ಅನಂತಯ್ಯ—ಅಯ್ಯ. ಇದೇನು ನಿನ್ನ ಬಾರಸಾಣಿಕೆ. ಮಗನ ನಾಮಕರಣದಲ್ಲಿ ಏನೇನೋ ನುಡಿಸ್ತಾ ಇದ್ದಿಯೋ "ಸುಕುಮಾರಾ ಸುಂದರಾ ನಸುನಗೆಯ ತೋರೋ ಬಾರೋ" ಅಂತ ಹಾಡಿದೆಯಲ್ಲಾ, ಅದನ್ನ ನುಡಿಸಬಾರದೆ?

ವಾಲಗದವ—ನನ್ನ ಗುರುಗಳು ಅದನ್ನು ಅಭ್ಯಾಸ ಮಾಡಿಸಲಿಲ್ಲ ಸ್ವಾಮಿ.

ಅನಂತಯ್ಯ—"ಯಥಾ ಗುರುಸ್ತಥಾ ಶಿಷ್ಯಾಂ"ತ. ನೀನು ನಿನ್ನ ಗುರು ಇಬ್ಬರೂ ಚೆನ್ನಾಗಿದ್ದೀರ—ಈ ಹಾಡು ಬರೋಲ್ಲಾಂದ್ರ ನೀನೇನಂ ವಾಲಗದವನೋ ಇಲ್ಲಾ ಹಜಾಮನೋ ಗೊತ್ತಾಗಲಿಲ್ಲ

ವಾಲಗದವ—ಅದೂ ನಮ್ಮ ಕಸುಬೇ ಆಯ್ತಲ್ಲಾ ಸ್ವಾಮೀ ನಾಳೆ ನಿಮ್ಮ ಮಗನ ಚೌಲಕ್ಕೆ ಕತ್ತಿ–ವಾಲಗ ಎರಡೂ ಹಿಡಿದು ಬರಬೇಡವೆ?

ಅನಂತಯ್ಯ—ಸರಿ ಸರಿ. ಈ ನಾಮಕರಣಕ್ಕೆ ಈ ಪಾಟಿ ಚೌಲವಾಯಿತು ಇನ್ನು ಚೌಲದಲ್ಲೇ ಗತಿಯೇನು?

(ಈ ಮಾತಿಗೆ ದೂರದಲ್ಲಿ ಗುಂಪು ಸೇರಿದ ಮಿತ್ರಮಂಡಲಿ ನಗುವುದು)

ಅಲ್ಲಿ ನೋಡು ಜನ ನಗ್ತಾ ಇದ್ದಾರೆ ನಗೆಯು ಬರುತಿದೆ ಎನಗೆ ಅನ್ನೊ ದಾಸರ ಪದನಾದರೂ ಪಲಕಿಸು.

ವಾಲಗದವ— ಈ ಹಾಡು ಶಾಶವಾಗೋದರವಳಗೆ ನಮ್ಮ ಗುರುಗಳು ಹರ ಹರ ಅಂದರು.

ಅನಂತಯ್ಯ—ಸರಿ ಸರಿ ನೀನು ಆಕಡೆ ಬೇಗ ಹರ ಹರ ಅಂದು ಬಿಡು. ಒಳ್ಳೆ ಪಂಡಿತ ಗಂಟು ಬಿದ್ದ ನನಗೆ ಏನಾದರೂ ಊದಿಕೋ-ನಿನ್ನ ಹತ್ತಿರ ಹರ ಟೋಕೆ ನನಗೆ ಪುರುಸೋತ್ತಿಲ್ಲಾ (ಎಂದು ಒಳಕ್ಕೆ ನಿಷ್ಕ್ರಮಣಿಸುತ್ತಲೂ ವಾಲಗದವನು "ಮನುಜ ಶರೀರ ವಿದೇನು ಸುಖಾ" ಅನ್ನೋ ಹಾಡು ಕಲು ಕಿಸುವನು ಇದನ್ನು ಕೇಳಿದ ಅತ್ತನಿಂದ ಮಿತ್ರ ಮಂಡಲಿ ಟೀಕಾ ಪ್ರಾರಂಭ)

ಕೋದಂಡ—ಕೇಳಿದ್ರೇನೋ ಆವಾಲಗದವನ ಹಾಡನ್ನು— ಅನಂತಯ್ಯ ನಮ್ಮನ್ನು ಗೇಲಿ ಮಾಡೋಕೆ ಮನುಜ ಶರೀರ ಇದೇನು ಸುಖಾ ಹಾಡು ಬಾರ್ಸತ್ತಾ ಇದ್ದಾನೆ.

ಲಿಂಗಮೂರ್ತಿ— ಆ ಹಾಡಿಗೂ, ನಮಗೂ ಸಂಬಂಧ ಇದೇ ಅಂತಿಯಾ ಕೋದಂಡಾ?

ಕೋದಂಡಾ— ಕಣಿ ಕೇಳು, ಕಪಿಯೇ, ಅನಂತಯ್ಯನ ಅಂತರಂಗ ನಾನು ಅರ್ಥ ಮಾಡಿ ಕೊಳ್ಳಬಲ್ಲೆ. ಅವನ ಮಗನ ನಾಮಕರಣಕ್ಕೆ ನಮ್ಮ ನಮ್ಮ ಹೆಂಡಿ ರನ್ನು ಪರಿಚಾರಕ್ಕೆ ಕಳಿಸಿದ ನಮ್ಮಂಥಾ ಮನುಜರ ಶರೀರ ವಿದೇನು ಸುಖಾ ಅಂತ ವಾಲಗದವನ ಮುಖಾಂತರ ಹೇಳಸ್ತಾ ಇದಾನ್ರೊ?

ಪಂಚಾಕ್ಷರಿ— ಖಂಡಿತವಾದ ಮಾತು ಕೋದಂಡಾ—ಆ ಡೋಲಿನವನ ಢಮು. ಢಮುತ್ಕಾರ ನೋಡು ನಮಗೆ ತಲೆ ಮೇಲೆ ಕುಟ್ಟಿದ ಹಾಗಿದೆ. ನಾನು ಗಂಡು, ನಮ್ಮಪ್ಪಗಂಡು ಅಂದಮೇಲೆ ನಮ್ಮ ತಾತಾನುಗಂಡು ಕೂಸಿನ ತಂದೆ ಆಗಿರಲೇ ಬೇಕು ಅಲ್ಲವೇ?

ಚಕ್ರಪಾಣಿ— ಅಯ್ಯೊ ಪಂಚಾಕ್ಷರಿ ಯಾರು ಅಲ್ಲಾಂದವರು. ನೀನು ಸುತ್ತಿ ಸುತ್ತಿ ಮಾತಾಡಬೇಡ ಎರಡೇ ಮಾತಲ್ಲಿ ಅದೇನು ಹೇಳಬೇಕೋ ಹೇಳು.

ಪಂಚಾಕ್ಷರಿ— ಈ ಚಕ್ರಪಾಣಿಗೆ ಒಂದು ಮಾತಾಡಿದರೆ ಹೆಚ್ಚು, ಎರಡು ಮಾತಾಡಿ ದರೆ ತೊಡರು. ಒಂದೇ ಮಾತ್ನಲ್ಲಿ ಹೇಳ್ತೀನೆ ಆಯ್ತೆ? ಇಂಥಾ ಗಂಡುಗಲಿ ಗಳ ವಂಶದ ಪರಂಪರೆಯ ವಂಶದ ನಮ್ಮಲ್ಲಿ ಮದುವೆಗೆ ಇಲ್ಲದ ಅದ್ಧುರಿ— ಅವಾಂತರ ಈ ಅನಂತಯ್ಯನಿಗೇಕೆ? ಹೇಳು ಕೋದಂಡಾ.

ಕೋದಂಡ—ಸರಿ Correctu ನಿನ್ನ ಮಾತು. ಗಂಡು ಮಗು ಆಗಿದ್ದರಿಂದ ಬಂದ ಭಾಗ್ಯವೇನು?

ಲಿಂಗಮೂರ್ತಿ— ಈ ಪ್ರಶ್ನೆಗೆ ಉತ್ತರ ಅನಂತಯ್ಯನೇ ಕೊಡಲಿ. ಅವನನ್ನೇ ಯಾತಕ್ಕೆ ಕೇಳಬಾರದೂ?

ಪಂಚಾಕ್ಷರಿ— ಬನ್ನಿ ಅನಂತಯ್ಯನ ಮನೆಗೆ ಹೋಗಿ ಅವನನ್ನು ಕೂಗಿ ಹೊರಕ್ಕೆ ಕರೆದು ಈ ಪ್ರಶ್ನೆ ಹಾಕಿ ಅವನ ಜಂಭ ಅವನ ಜಬರದಸ್ತೇನ ಇಳಿಸೋಣಂತೆ ಬನ್ನಿ.

ಕೋದಂಡ—ಸರಿ, ಪಂಚಾಕ್ಷರಿ ಬಾ—ಬನ್ರೋ ಹೋಗೋಣ. ಕೇಳೇಬಿಡೋಣ ....ಏನು ಗಡಿ ಬಿಡಿ ನೆಡಿತಾ ಇದೆ ಅವನ ಮನೇಲಿ—ಪಂಚಾಕ್ಷರಿ ನೀನೇ ಮೊದಲು ಹೋಗಿ ಅನಂತಯ್ಯನ್ನ ಕೂಗಯ್ಯಾ.

ಪಂಚಾಕ್ಷರಿ — ಓ ಹೋ....ಅದಕ್ಕೇನಂತೆ....ಇಕ್ಕೊ ಹೊರಟೆ.

(ಅನಂತಯ್ಯನ ಮನೆ ಮುಂದೆ ನಿಂತ—"ಅನಂತೂ—ಅನಂತಯ್ಯ" ಎಂದು ಕೂಗಿದಾಗ, ಪಂಚಾಕ್ಷರಿಯ ಹೆಂಡತಿ ರುದ್ರಮ್ಮ ಎದುರಿಗೆ ಬಂದು ನಿಲ್ಲುವಳು.)

ರುದ್ರಮ್ಮ—ಯಾರದೂ ೂ ೂ....ನೀವೇ—ಇದೇನೂಂದ್ರೇ ಇಲ್ಲಿಗೆ ಬಂದಿರಿ....ಆಂ

ಪಂಚಾಕ್ಷರಿ—ನೀನೇನೇ ...ಆಂ ...ಹೂಂ....ಅ ಆ ಅನಂತಯ್ಯನ್ನಾ....

ರುದ್ರಮ್ಮ—(ಗದರುವ ಧನಿಯಲ್ಲಿ) ಏನು ಅನಂತಯ್ಯನೋರಿಗೆ—ಪಾಪ ಮಗನ ನಾಮಕರಣಾಂತ ಗಂಡ ಹೆಂಡ್ತಿ ಓಡ್ಯಾಡ್ತಾ ಇದ್ದಾರೆ. ಈ ಹೊತ್ತಿನಲ್ಲಿ ಇಸ್ಪೀಟಿಗೆ ಕರಿಯೋಕೆ ಬಂದಿರಾ—

ಪಂಚಾಕ್ಷರಿ—ಅವರನ್ನಲ್ಲಾ ಕಣೇ....ಆಂ....ನಿನ್ನ ...

ರುದ್ರಮ್ಮ—ಬಹಳ ಚೆನ್ನಾಗಿದೇಂದ್ರೆ—ನಿಮಗೇನು ಗೊತ್ತಾಗಲ್ವೇಂದ್ರೆ—ಇನ್ನೂ ಮಗೂಗೆ ಎಣ್ಣೆ ಶಾಸ್ತ್ರವಾಗಿಲ್ಲ—ಅಡಿಗೆಗೆ ಎಲ್ಲಾ ವದ್ದಾಡ್ತಾ ಇದ್ದೀವಿ, ಈಗ ಕರಿಯೋಕೆ ಬರ್ತೀರಲ್ಲಾ ನಾನೇನು ಹೇಳಲಿ—ಅಯ್ಯೋ ರಾಮ ನೋಡಿದ ವರು ಏನಂದಾರೂಂತ ನಿಮಗೆ ತಿಳಿಯೋಲ್ವೆ.

ಪಂಚಾಕ್ಷರಿ—ಲೇ....ಲೇ. ಮೆತ್ತಗೆ ಬೈಯ್ಯೆ. ಯಾರಾದರೂ ಕೇಳಿಸಿಕೊಂಡಾರು ಸಧ್ಯ ನಾನು ಹೋಗ್ತೀನಿ.

ರುದ್ರಮ್ಮ—ಹೊರಡಿ ಮತ್ತೆ—ಅರಶಿನ ಕುಂಕುಮಕ್ಕೆ ಅಣಿಮಾಡ್ತಾ ಇದ್ದೀನಿ ಆಗಲೇ ಬಂದರು. (ಮನೆಯೊಳಗೆ ನಿಷ್ಕ್ರಮಣ)

ಕೋದಂಡ—ಅಲ್ಲಿ ನೋಡ್ರೋ ಬಂದ ದಾರಿಗೆ ಸುಂಕವಿಲ್ಲಾಂತ ವಾಪಸ್ಸು ಬರ್ತಾ ಇದ್ದಾನೆ ಪಂಚಾಕ್ಷರಿ. ಬಾರಯ್ಯ ಯಜಮಾನಾ—ಅನಂತಯ್ಯ ಏನಂದ.... ಅರೆ! ಇದೇನೋ ಈ ಪಾಟಿ ಬೆವರ್ತಿದ್ದೀಯಾ?

ಪಂಚಾಕ್ಷರಿ—ವಿಪರೀತ ಸೆಖೆ ಕಣ್ರೋ.... ...ಅನಂತಯ್ಯ ಮನೆಲಿಲ್ವಂತೆ. ಮನೆ ಮುಂದೆಯೇ ಸಿಕ್ಕ ನನ್ನ ಹೆಂಡತಿ ಹೇಳಿದಳು.

ಕೋದಂಡ—ಎಲ್ಲಾ ಬುರುಡೆ ...ಅವನ್ನ ಕರೀದೇನೆ ನೀನು ಬೆ ಬೆ ಬೆ ಅಂತ ಹೆದರಿ ಬಂದಿದ್ದೀಯ ನಾನೇ ಹೋಗಿ ಕರಕೊಂಡು ಬರ್ತೀನಿ.

(ಲಿಂಗಮೂರ್ತಿ ಒಂಟಿ ಶೀನು ಸೀನಿದ)

ಚಕ್ರಪಾಣಿ— ಇನ್ನೊಂದು ಸೀನು ಸೀನೋ ಲಿಂಗಮೂರ್ತಿ, ಕೋದಂಡ ಹೋದ ಕೆಲಸವಾದರೂ ಆಗಲಿ.

ಕೋದಂಡ ಸಾಕು ಸುಮ್ಮನಿರಪ್ಪಾ ಚಕ್ರಪಾಣಿ. ಅನಂತಯ್ಯನ ಕರಿಯೋದು ಮಹಾ ದೊಡ್ಡ ಕೆಲಸ, ಅದಕ್ಕೆ ಶಕುನಾ ಬೇರೆ - ಇಕೋ ಹೊರಟೆ.

(ಅನಂತಯ್ಯನ ಮನೆ ಮುಂದೆ ಹೋಗಿ—"ಅನಂತ ರಾಮೂ, ಅನಂತೂ" ಎಂದು ಕೂಗಿದಾಗ ಕೋದಂಡನ ಅರ್ಧಾಂಗಿ ಕಾಮಾಕ್ಷಿ ಎದುರಿಗೆ ಬಂದು ನಿಲ್ಲುವಳು)

ಕಾಮಾಕ್ಷಿ—ಏನ್ರಿ ಇದು....ಏನು ಬಂದದ್ದು.

ಕೋದಂಡ—(ಬೆದರಿದ ಬೆಕ್ಕಿನಂತೆ) ಕ ಕ ಕ ಕಾಮಾಕ್ಷಿ....ನೀನೇ ಬಂದದ್ದು ಸರಿಯೇ....ಅ ಅ ಅನಂತಯ್ಯನೋರ್‍ನ ನೋಡಬೇಕಿತ್ತು ಅದಕ್ಕೆ ಬಂದಿದ್ದು.

ಕಾಮಾಕ್ಷಿ—ಹೋ ಹೋ ೯ ೯ ಅನಂತಯ್ಯನೋರನ್ನೋ....ನನ್ನನ್ನೇ ನೋಡೋಕೆ ಬಂದಿರೇನೋಂತಿದ್ದೆ.

ಕೋದಂಡ—ಹಿ ಹಿ ಹಿ ಹಿ. ನಿನ್ನ ಆರು ವರ್ಷದಿಂದ ನೋಡೋತ್ಲೆ ಇದ್ದೀನಲ್ಲಾ ....ಹಿ ಹಿ....ಅನಂತೂನ್ನ ಕೊಂಚ ನಾನು ಕರೀತೀನಿ ಅಂತ ಹೇಳಬೇಕಲ್ಲಾ....

ಕಾಮಾಕ್ಷಿ—ಸಾಕು ದಯಮಾಡ್ಸಿ....ಮೂರು ಗಂಡು ಮಕ್ಕಳಾದರೂ.....ಇಂಥಾ ಭರ್ಜರಿ ನಾಮಕರಣ ಕಾಣೆ—ಪಾಪ ಆತ ಅನಂತಯ್ಯ ಹೆಂಡತಿ ಮಾತಿನಂತೆ ಪಂಚಭಕ್ಷ್ಯ ಮಾಡ್ಸಿದ್ದಾರೆ, ಅದೇ ಅರ್ಧಾಂಗಿ ಮಾತಿನಂತೆ. ಈಗ ನೀರು ಮನೆಗೆ ಭಾವಿಯಿಂದ ನೀರು ಸೇದುತ್ತಾ ಇದ್ದಾರೆ. ನಿಮ್ಮ ಇಸ್ಪೀಟು ಕಛೇರಿಗೆ ಬರೋಕಾಗುತ್ಯೇ... .ಹೊತ್ತು ಗೊತ್ತಾಗುಲ್ವೆ ನಿಮಗೆ. ಸಾಕು ಹೋಗಿ ಚೆನ್ನಾಯ್ತು.

ಕೋದಂಡ—ತ್ಸ್ಸ, ತ್ಸ್ಸ, ತ್ಸ್ಸ ... ಮೆಲ್ಲಗೆ ಮಾತಾಡೇ ಮಹರಾಯ್ತಿ, ಯಾರಿಗಾ ದರೂ ಕೇಳ್ಸೀತೂ.

ಕಾಮಾಕ್ಷಿ—ಕೇಳಿದ್ರೇನೀಗಾ ಅವರಿಗೂ ಗೊತ್ತಾಗಲಿ ನಿಮ್ಮ ಚರ್ಯೆ. ಮಗು ನ್ನಾಡಿಸಿಕೊಳ್ಳಿಂದ್ರೆ, ಏನೋ ಕುಂಟು ನೆಪ ಹಾಕಿಕೊಂಡು ನನ್ನ ಕರಿಯೋಕೆ ಬಂದಿದ್ದೀರಿ—ಈಗ ಆರತೀಗೆ ಅಣಿಮಾಡ್ತಾ ಇದ್ದೇನೆ. ತಾವು ದಯಮಾಡ್ಸಿ.

(ಎಂದು ಒಳಗೆ ನಿಷ್ಕ್ರಮಣ, ಕೋದಂಡ ವಾಪಸ್ಸು ಮಿತ್ರರ ಬಳಿ ಬರುವನು)

ಕೋದಂಡ—ಪಂಚಾಕ್ಷರಿ ಹೇಳಿದ್ದು ನಿಜ. ಅನಂತಯ್ಯ ಮನೇಲಿ ಇಲ್ಲಾಂತ, ನನ್ನಾಕೇನೆ ಎದುರಿಗೆ ಸಿಕ್ಕಿ ಹೇಳಿದಳು ಬನ್ನಿ ಹೋಗೋಣ.

ಪಂಚಾಕ್ಷರಿ—ನಾನು ಹೇಳಲಿಲ್ಲವೇ....ನಿನ್ನ ಮಾತು ನಿಜ ಕಣೋ ಕೋದಂಡ.

ಲಿಂಗಮೂರ್ತಿ—(ರೇಗಿ) "ಓತಿಕ್ಯಾತನಿಗೇ ಬೇಲಿ ಸಾಕ್ಷಿ" ಅಂತ ಅಂದ ಹಾಗೆ ನಿನಗೆ ಅವನ ಸಾಕ್ಷಿ ನಾನು ನಂಬೋಲ್ಲ. ಈಗತಾನೆ ಮನುಜ ಶರೀರ ವಿದೇನು ಸುಖಾಂತ ಚಾರ್ಸಿಸಿ ನಮ್ಮನ್ನು ಸತಾಯಿಸಿ ಮನೇಲಿ ಅಡಗಿದ್ದಾನೆ, ನಾನು ಈಗಿಂದೀಗಲೇ ಆ ಪಾಪಿ ಪಾತಾಳದಲ್ಲಿದ್ದರೂ ಹಿಡಿಸಿ ಕರೆದು ತರ್ತೀನಿ. ನನ್ನ ಹೆಂಡತಿ ಅವನ ಮಗನ ನಾಮಕರಣಕ್ಕೆ ಕೊಬ್ರಿ ತುರಿ ಯೋದು ನನಗೆ ಹಿಡಿಸೋಲ್ಲ. (ಎಂದು ದಡಬಡನೆ ಹೊರಡುವನು)

ಕೋದಂಡ—ಮೆಲ್ಲಗೆ ಹೋಗೋ ಆತುರವೇನೂ ಇಲ್ಲ....ಅಲ್ನೋಡಿ ಅವನು ಮನೆ ಬಾಗಿಲು ಸೇರೋ ಹೊತ್ತಿಗೆ ಸರಿಯಾಗಿ ಲಿಂಗಮೂರ್ತಿ ಹೆಂಡ್ತೀನೆ ಮುಂಬಾ ಗಿಲಲ್ಲಿ ಪೊರಕೆ ಮರ ಹಿಡಿದು ನಿಂತಿದ್ದಾಳೆ. ಹಾಗೇ ಕೇಳಿ ಅವರ ಸಂವಾದಾನ....

(ಎದುರಿಗೆ ನಿಂತ ಪಾರ್ವತಿಯನ್ನು ಕಂಡಾಗ ಅವನ ಜಂಘಾಬಲವೇ ಬಿದ್ದು ಹೋಯ್ತು. ಅವನು ಇದನ್ನು ನಿರೀಕ್ಷಿಸಿರಲಿಲ್ಲ.)

ಪಾರ್ವತಮ್ಮ—ಇದೇನ್ರೀ....ನಾನು ಹೇಳಿದ ಹಾಗೆ ಮಾಡಿದ್ದೀರಲ್ಲಾ. ಬೇಗ ಬಂದುಬಿಡ್ತೀನಿ ಬರಬೇಡಿ ಎಂದು ಹೇಳಿರಲಿಲ್ಲವೇ ?

ಲಿಂಗಮೂರ್ತಿ—ನಿನ್ನ ಕರೆಯೋಕಲ್ಲಕಣೇ ನಾನು ಬಂದದ್ದು....ಒಂದು ಪ್ರಶ್ನೆ ಕೇಳಬೇಕಾಗಿತ್ತು ಅನಂತಯ್ಯನ್ನ ಅದಕ್ಕೆ ಬಂದೆ.

ಪಾರ್ವತಮ್ಮ—ಹಿತ್ತಲ ಕಡೆ ನೀರು ಸೇದುವಾಗ ಅರ್ಧಕ್ಕೆ ಬಂದರೆ ಅವರ ಹೆಂಡ್ತಿ ಸುಬ್ಬಮ್ಮನೋರು ಸುಮ್ಮನಿರ್ತಾರ್ಯೇ? .. .ಅದೇನು ಪ್ರಶ್ನೆ ನನ್ನೇ ಕೇಳಿ ಏನೀಗ?....ನನ್ನ ನೋಡೋಕೆ ಬಂದಿರೋರು ಹೇಳೋದು ಅವರ ಮೇಲೆ ಅದ್ಯಾತಕ್ಕರೀ ಈ ಕಳ್ಳ ವಿದ್ಯಾ.

ಲಿಂಗಮೂರ್ತಿ—ನೀನು ಸದ್ಯ ರೇಗಬೇಡ—ನೀನೇ ಹೇಳು ಉತ್ತರ ನನಗೇನಂತೆ —"ಈ ಕೇವಲ ಒಂದು ಗಂಡು ಕೂಸಾದ್ದಕ್ಕೆ ಯಾಕೆ ಇಷ್ಟು ಅದ್ಧೂರಿಯೋ" ಎಂದು ಕೇಳಬೇಕಿತ್ತು.

ಪಾರ್ವತಮ್ಮ—ಅ ಹ ಹ ಹ. ಏನು ಪ್ರಶ್ನೆಯೋ....ನಿಮ್ಮಪ್ಪನಿಗೆ ನೀವು ಮೆಚ್ಚಿನ ಕೂಸು ತಾನೆ—ನೀವೇ ಹೋಗಿ ಮಾವನವರನ್ನು ಕೇಳಿ— ಉತ್ತರ ಹೇಳ್ತಾರೆ. ಬಂದರು ಭಿರಿಭಿರೀಂತ— ಈ ಕಳ್ಳ ಪ್ರಶ್ನೆ ಸಾಕು ನಾನೆಲ್ಲೂ ಓಡಿಹೋಗುಲ್ಲಾ ಮನೆಗೆ ದಯಮಾಡ್ಸಿ — ಈ ಆರತಿ ಆದಕೂಡ್ಲೆ ಊಟಮಾಡಿಕೊಂಡು ಬರ್ತೀನಿ.

(ಮಿತ್ರ ಮಂಡಲಿಯತ್ತ ನಿಧಾನವಾಗಿ ನಿಷ್ಕ್ರಮಣ)

ಕೋದಂಡ—ಅಲ್ಲಿ ನೋಡ್ರಯ್ಯಾ....ಲಿಂಗಮೂರ್ತಿ ಇಂಗು ತಿಂದ ಮಂಗನ ಮುಖ ಮಾಡ್ಕೊಂಡು ಹಿಂತಿರುಗುತ್ತಿದ್ದಾನೆ.

ಲಿಂಗಮೂರ್ತಿ—ಆ ಅನಂತಯ್ಯನ್ನೇನು ಕೇಳೋದು, ಅವನೇನೋ ವಿಪರೀತ Busy ಅಂತೆ ನನ್ನ wife ಹೇಳಿದರು. ಬನ್ರೋ... ಮತ್ತೆ ಪಂಚಾಕ್ಷರಿ ಮನೆ ಜಗಲಿ ಮೇಲೆ ಪಂಚಾಯ್ತಿ ಮಾಡೋಣಂತೆ.

ಚಕ್ರಪಾಣಿ—ಅಯ್ಯಾ ಪಂಚಾಕ್ಷರಿ, ಲಿಂಗಮೂರ್ತಿ, ಕೋದಂಡ ಇತ್ಯಾದಿ ಮಿತ್ರರೇ! ಕೊಂಚ ನನ್ನ ಮಾತು ಕೇಳಿ. ನಿಮ್ಮಗಳ ಪರಾಜಯ ನೋಡಿ ನನಗೆ ವ್ಯಥೆಯಾಗಿದೆ.

ಕೋದಂಡ—ಹೋ, ಹೋ, ಹೋ... ಸಾಕಪ್ಪ ಚಕ್ರಪಾಣಿ ನಿನ್ನ ಭಾಷಣ. ನಾವು ಸೋತೆವು ನಿಜ. ನೀನೇ ಹೋಗಿ ಅನಂತಯ್ಯನ ಕರಿ ನೋಡೋಣ.

ಚಕ್ರಪಾಣಿ—ನಾನು ಕೈತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳೋ ಕೆಲಸಕ್ಕೇ ಹೋಗುಲ್ಲಾ ನೀವೆಲ್ಲಾ ಹೀಗೆ ಅನಂತಯ್ಯನ ಮನೆ ನಾಮಕರಣಕ್ಕೆ ನನ್ನ ಇಷ್ಟು ಹಗರಣಕ್ಕೆ ತಂದದ್ದು ನಿಮ್ಮ, ನಮ್ಮ ಅರ್ಧಾಂಗಿಯರು ಅನಂತಯ್ಯನ ಮನೆಂಗುಲ್ಲಿ ಅವರು ಪಂಚಭಕ್ಷ್ಯ ಪರಮಾನ್ನ ಹೊಡೆಯುತ್ತಿರುವಾಗ ಅರ್ಧಾಂಗ ರಾದ ನಮಗೆ ಅರ್ಧ ಹೊಟ್ಟೆಗಾದರೂ ಪರಮಾನ್ನ ಬೇಡವೇ ಅನ್ನೋ ಅಸೂಯೆ ಅಲ್ಲವೇ?

ಲಿಂಗಮೂರ್ತಿ—ನಮ್ಮನ್ಯಾತಕ್ಕೆ ಆ ಅನಂತ ಕರಿಬಾರ್ದು ಊಟಕ್ಕೆ? ಇದು ನ್ಯಾಯವೇ? ನಮ್ಮ ಅರ್ಧಾಂಗಿಯರಿಗೇಕೆ ಈ ಆಹ್ವಾನ? ಹೇಳಯ್ಯ, ಚಕ್ರಿ.

ಚಕ್ರಪಾಣಿ—ಅದರಲ್ಲಿ ಅರ್ಥವಿದೆ. ಅನಂತಯ್ಯನ ಹೆಂಡತಿ ಸುಬ್ಬಮ್ಮ ಈ ಕೇರಿ ಯಲ್ಲಿರುವ ಹೆಂಗಸರಿಗೆಲ್ಲಾ ಬೇಕಾದಾಕೆ. ಯಾವ ಮಕ್ಕಳಿಗೆ ಏನು ಖಾಯಿಲೆ ಯಾಗಲಿ, ಯಾವ ತಾಯಿಗೆ ಏನು ತೊಂದರೆಯಾಗಲಿ ಸುಬ್ಬಮ್ಮ ಸಹಾಯಕ್ಕೆ ಸಿದ್ಧ. ಅಂಥ ಪರೋಪಕಾರದ ಗೃಹಿಣಿಗೆ ಅಪರೂಪಕ್ಕೆ ಒಂದು ಗಂಡುಮಗು ಆದರೆ ಇಡೀ ವಠಾರದ ಹೆಂಗಸರೇ ಅಕರಾಸ್ತೆಯಿಂದ ನಾಮಕರಣ ಮಾಡೋದ ರಲ್ಲಿ ಏನಾಶ್ಚರ್ಯ?

ಕೋದಂಡ—ಹೌದು. ಚಕ್ರಪಾಣಿ ನೀನು ಹೇಳೋದು ನಿಜ. ನಾವು ಬರೀ ಆ ಅನಂತಯ್ಯನ ಮೇಲೆ ಅಸೂಯೆ ಪಟ್ಟಿದ್ದು ಅಕ್ಷಮ್ಯ ಅಪರಾಧ.

ಚಕ್ರಪಾಣಿ—ಅಲ್ಲ ನೋಡಿ ಎಷ್ಟು ಸಂತೋಷದಿಂದ ಸಂಭ್ರಮದಿಂದ ಕೂಸಿಗೆ ಹಾಡುಹೇಳಿ ಆರ್ತಿ ಮಾಡ್ತಾ ಇದ್ದಾರೆ— ಎಷ್ಟು ಸೊಗಸಾಗಿ ಆರತಿ ಹಾಡು ಕೇಳಿ ಬರ್‍ತಾ ಇದೆ ಆಲಿಸಿ ಕೇಳಿ.

[ಅನಂತಯ್ಯನ ಮನೆಯಿಂದ ಇಬ್ಬರು ಹೆಂಗೆಳೆಯರು ಮಧುರ ಕಂಠದಲ್ಲಿ ಆರತಿ ಹಾಡು ಹೇಳುವುದು ಕೇಳಿಬರುವುದು .. "ಬೆಳದಿಂಗಳೊಳ್ ಕೃಷ್ಣ ಕೊಳಲೂ ದುತಲೀ ನಳಿನಾಕ್ಷಿಯರ ಮನ ಸೆಳೆಯುತಲಿ ಎಳೆ ತುಳಸೀ ವನಮಾಲೆಯು

ಧರಿಸಿದ ಬಾಲನಿಗೆ ಮುದ್ದು ಲೋಲನಿಗೆ ಆರುತಿ ತಾ ಕೃಷ್ಣಮೂರುತಿಗೆ, ಮೂರುತಿಗೇ ಪಾರ್ಥಸಾರಥಿಗೆ ...."]

(ಈ ಹಾಡಿನ ಹಿನ್ನೆಲೆಯಲ್ಲೇ)

ಚಕ್ರಪಾಣಿ—ಈಗ ನೋಡ್ತಾ ಇರಿ ಅನಂತಯ್ಯನ ಕೈಯಲ್ಲೇ ಆತನ ಕೈಹಿಡಿದಾಕೆ ನಮಗೆಲ್ಲಾ ಭೋಜನಕ್ಕೆ ಆಹ್ವಾನ ಕಳಿಸುತ್ತಾಳೆ.

ಕೋದಂಡ—ಅರೆ! ಹೌದಲ್ಲೋ ಚಕ್ರಪಾಣಿ; ರೇಷ್ಮೆ ಮುಗುಟಧಾರಿಯಾಗಿ ಅನಂತಯ್ಯ ಈ ಕಡೆಗೇ ಬರುತ್ತಿದ್ದಾನೆ! ಕೈಯಲ್ಲಿ ಮಂತ್ರಾಕ್ಷತೆ ಒಟ್ಟಲೂ ಇದ್ದ ಹಾಗಿದೆ. (ಅನಂತಯ್ಯನ ಆಗಮನ)

ಅನಂತಯ್ಯ—ಪಂಚಾಕ್ಷರಿ, ಲಿಂಗಮೂರ್ತಿ, ಊಟಕ್ಕೆ ದಯಮಾಡಿಸಬೇಕು. ಚಕ್ರಪಾಣಿ ಕೋದಂಡ ನೀವುಗಳು ಬರಬೇಕಪ್ಪ–ಖಂಡಿತ ಬರಲೇಬೇಕು. ಕರೆದುಕೊಂಡು ಬರಲೇಬೇಕೆಂದು ನಮ್ಮನೇಲಿ ಹೇಳಿಕಳುಹಿಸಿದ್ದಾರೆ.

ಲಿಂಗಮೂರ್ತಿ ಕೋದಂಡ—ಹ್ಹ ಹ್ಹ ಹ್ಹ ಹ್ಹ....ಚೆನ್ನಾಗಿದೆ. ಮನೇಲಿ ಹೇಳ್ದಿ ಇದ್ರೆ ನಮ್ಮನ್ನು ಕರೀತಿರ್ಲಿಲ್ಲಾನ್ನು.

ಅನಂತಯ್ಯ—ನನಗ್ಯಾಕೆ ಬೇಕಪ್ಪಾ ಈ ಮನೆ ಜವಾಬ್ದಾರಿ. ದುಡಿದು ಹಾಕೋ ಗಂಡುಗಲಿ ನಾನು. ಮನೇಲಿ ಸಂಸಾರ ನಡೆಸೋ ಹೆಣ್ಣುಹುಲಿ ಅವಳು. ಆ ಸಂಸಾರದ ಬಾಬತ್ತು ಊಟ–ಉರುಟಣೆ–ಉಪ್ಪಿಟ್ಟುಗಳ ವಿಚಾರ ಆವಳು ಹೇಳಿದಹಾಗೆ ಕೇಳಿದರೆ ಸಂಸಾರದಲ್ಲಿ ಜಗಳವಿರೋಲ್ಲ ಹೌದೊ?

ಚಕ್ರಪಾಣಿ—ಸರಿ ಸರಿ.... ನಾವು ನಿನ್ನ ಮಿತ್ರರೇ – ನಾವು ಹಾಗೆ ಮಾಡೋರು ಬನ್ರಯ್ಯಾ....ಊಟಕ್ಕೆ ...ಬನ್ನಿ ಬನ್ನಿ

ಕೋದಂಡ –ನಡೀರಿ ನಡೀರಿ–ಆಗಲೆ ಎಲೆಹಾಕಿ ಬಡಿಸಿರಬಹುದು.

ಅನಂತಯ್ಯ—ಬಹುದು ಏನು ಬಂತು – ಮಗೂನ್ನ ತೊಟ್ಟಲಿಗಿಡೋ ಹಾಡು ಪ್ರಾರಂಭಿಸಿದ್ದರು. ಬನ್ನಿ ಆಗಲೇ ಅಣಿಯಾಗಿದೆ ನಿಮ್ಮ ನಿಮ್ಮ ಮನೆಯವರು ಬಡಿಸಿ ಕಾದಿದ್ದಾರೆ. ಬನ್ನಿ ಬೇಗ ಬೇಗ.

[ಅನಂತಯ್ಯನ ಮನೆ ಸಮೀಪಿಸಿದಂತೆ ಜೋಗುಳದ ಹಾಡು ಕೇಳಿಬರುತ್ತದೆ]

"ನಾಮುವ ಬಳಿವರೆ ಭೂತಪ್ಪನೆಂದೆ|
ಕೈತಪ್ಪಿಬಿದ್ದರೆ ಕಾಲಿರಡು ತುಂಡೆ ಜೋ ಜೋ||
ಜೋ, ಜೋ, ಜೋ, ಗುಂಡ ನೀ ಪ್ರಚಂಡಾ
ಜೋ, ಜೋ, ಜೋ, ಜೋ, ಜೋ ಗೋವಿಂದಾ ಜೋ, ಜೋ."

ದಾಶರಥಿದೀಕ್ಷಿತ್

ಯಾತ್ರಿಕರ ಪತ್ರ

(೯)

ಬಡಕನಹಳ್ಳಿಗೆ ವಾಪಸ್ ಬಂದೆವು. ಚಂದಿ ದಾರಿಯುದ್ದಕ್ಕೂ ನನ್ನ ಹಿಂದೆ ಸುಮಾರು ಹತ್ತಡಿದೂರದಲ್ಲಿ – ಐದು ನಿಮಿಷಕ್ಕೊಮ್ಮೆ "ಪ್ಚ, ಪ್ಚ" ಅಂತ ಲೊಚ ಗುಟ್ಟುತ್ತಾ ಬಂದ. ನಂಗೆ – ಅವನನ್ನ ಕಾಡಿಸೋಕೆ ಮನಸ್ಸು ಬರದೆ ಸುಮ್ಮನಿದ್ದೆ. ಹಳ್ಳಿಯಲ್ಲಿ ಮೇಷ್ಟ್ರು ಭೇಟಿಯಾಯಿತು. ಅವರ ಸ್ಕೂಲಲ್ಲಿ ಯಾರೋ ನಮಗಾಗಿ ಕಾದಿದಾರೆಂದು ತಿಳಿದು ಅಲ್ಲಿಗೆ ಹೋದೆವು. ಸ್ಕೂಲಾಚೆ ಬಿಸಾಡಿದ್ದ 'ಕಾಡಾನೆ' ಸಿಗರೇಟ್ ಪ್ಯಾಕಿಂದ–ರಾಜನ ಗುರುತು ಸಿಕ್ಕಿತು. ಪರಸ್ಪರ ಬೈದಾಟವಾದಮೇಲೆ ಊರಿಂದ ನನಗೆ ತಂದಿದ್ದ ಲಕ್ಕೋಟೆಯೊಂದನ್ನ ಕೊಟ್ಟ.

Insurance Premium ನೋಟೀಸು!

"ತಕ್ಷಣ ಪಾವತಿಮಾಡಹೇಳಿದ್ದಾರೆ–ಮನೇಲಿ" ಅಂದ ರಾಜ.

"ಹ್ಞೂ" ಗುಟ್ಟಿದೆ.

ಮಾರನೇದಿನ ಬಡಕನಹಳ್ಳಿ ಬಿಟ್ಟೆವು. ಪರಸ್ಪರ ವರದಿಗಳನ್ನೊಪ್ಪಿಸುವುದರಲ್ಲೇ ಹಾದಿ ಸವೆಯಿತು. ನನ್ನ ಚಂದಿಯ ಸೈಕಲ್ ಸವಾರಿ – ಮೊದಲ್ಗೊಂಡು – ತಮಟೆ ಗೆರೆಗೆ ಹೋಗಿಬಂದ ವಿಷಯವೆಲ್ಲಾ ತಿಳಿಸಿದ್ದಾಯಿತು.

"Public opinion ಬಹಳ strong ಆಗಿದೆ ಕಣೋ" ಅಂದ ರಾಜ ಗಂಭೀರವಾಗಿ.

"ಯಾವ ವಿಷಯದಲ್ಲಿ?" ಅಂತ ಕೇಳಿದೆ.

"ಇದೇ ಕಣೋ – ನಮ್ಮ Lifeನ ಬೇರೊಬ್ಬರು Regulate ಮಾಡೋ ಈಗಿನ ವ್ಯಾಪಾರ" ಅಂದ.

ರಾಜ ಪುನಹ ಹೇಳಿದ—"ನನ್ನ ಭಾವ Collage Professor-ಮೊನ್ನೆ England ಇಂದ ಬಂದ. ಅವನು ಹೇಳೋಪ್ರಕಾರ 'Country to heading towards economic collapse' ಅಂದ. ನಂಗೇನೋ ಅವನು ಹೇಳಿದ figuresಉ ತಲೇಗೆ ಹತ್ಲಿಲ್ಲ ತಲೆತೂಗಿದೆ–ಎಲ್ಲರ ಜೊತೇಲೂ. ಏನೇನೋ

ಪಡೆಸಿದ. England ವಿಷಯ ಹೇಳಿದೆ-ಸಿನಿಮಾಲಿದ್ದಾಗಿತ್ತು. ಶಂಗಸ್ಸಕ್ತಿ ಅಲ್ಲಾ ಹತ್ತತ್ರ ಇನ್ಸ್ಯೂರೊಪರ್ ದರ್ಬಾರ್ ಮಾಡಿದ್ದಾರೆ ಇಲ್ಲಿ. ನನ್ನ ಭಾವ ಹೇಳೋದು ನೋಡಿದ್ರೆ-ಬೇಕಾದಷ್ಟು ಒಳ್ಳೆ ವಿದ್ಯೆ, ನಡತೆಗಳನ್ನ ಅವರೇ ಜೋಪಾನ ವಾಗಿಟ್ಕೊಂಡು ನಮಗೆಲ್ಲಾ ತೋರಿಸಲೇ ಇಲ್ಲಾಂತ ಕಾಣುತ್ತೆ. ಅವನು ಹೇಳ್ತಾನೆ 'we are doing much more to God whom we cannot understand than to man whom we can' ಅಂತ. ಅಂದ್ರೆ-ದೇವ ರಲ್ಲಿ ಭಕ್ತಿ ಇಡ್ಕೋಣ. ಆದರೆ ದೇವರಿಗೆ ಯಾವುದು ತೃಪ್ತಿ? ನಾವು ಖರ್ಚು ಮಾಡಿದ ದುಡ್ಡೇ, ತೆಂಗಿನಕಾಯಿಗಳೇ, ಬಾಳೇಹಣ್ಣುಗಳೇ -ಅವುಗಳಲ್ಲಿ ಯಾವುದು ತಾನೇ ದೇವರು ಸ್ವೀಕಾರಮಾಡ್ತಾನೆ? ಅವೆಲ್ಲಾ ನಮ್ಮ ಹೊಟ್ಟೆಗೆ ತಾನೇ ವಾಪಸ್ಸು? ದೇವರಿಗೆ ದುಡ್ಡಿನೋರನ್ನು ಕಂಡ್ರೆ ಆನಂದ, ದರಿದ್ರರನ್ನ ಕಂಡರೆ ಅಸೂಯೆಯೇ? God as we understand him-ದಯಾಳು-ಪರಮಾತ್ಮ-ಆದರೆ ನಾವೇನ ಸ್ಕೊಂಡಿದ್ದೇವೆ? 'ದೇವರು ತನ್ನ ಸ್ವರೂಪವಾಗಿ ನರನನ್ನ ಮಾಡಿದ' ಅನ್ನೋದನ್ನ ಮರೆತು-'ದೇವರೇ ಮನುಷ್ಯನ ರೂಪ' ಅಂತ ಮಾಡಿದ್ದೇವೆ. ನಮ್ಮಲ್ಲಿರೋ ಅನಿಷ್ಟ ಗಳನ್ನೆಲ್ಲಾ ದೇವರಲ್ಲಿಯೂ ತುಂಬಿ- 'we have made him a play-boy a mere play boy!' ನಮ್ಮಲ್ಲಿರೋ ಜಾತಿ ಭೇದ ಅವನಿಗೂ ಇದೆ. ನಮ್ಮ ಲ್ಲಿರೋ ಪಾರ್ಟೀ ಭೇದ ಅವನಿಗೂ ಇದೆ, ನಮ್ಮಲ್ಲಿರೋ ಸಾಹುಕಾರ್-ಗರೀಬ್ ಭೇದ ಅವನಿಗೂ ಇದೆ-ಅಂತ ಸಾಧಿಸ ತ್ತಿದ್ದೇವೆ. ನಾವು ಮಾಡೋ ಪಾಪಕ್ಕೆಲ್ಲಾ ಪರಿಹಾರ ಸಿಗುತ್ತೆ ಅಂತ- ಪರಿಹಾರಾನ advertise ಮಾಡ್ತೀವಿ. ಆ ಪರಿಹಾರ enjoy ಮಾಡೋಕೆ ಪಾಪ ಮಾಡ್ಲೇಬೇಕು ..."

"ತಡಿಯೋ, ತಡಿಯೋ-ಇದೇನು ಬೇರೆ ಮತಸ್ಥಾಪನೆಮಾಡ್ತೀಯೋ-ಇಲ್ಲಾ ಹೊಟ್ಟೆಕೆಟ್ಟು ಮೆದುಳಿಗೆ ಹೋಗಿದೆಯೋ?" ಅಂತ ತಡೆದ ಚಂದಿ.

ಆದಕ್ಕೆ ರಾಜ—"ಇಲ್ವೋ- ಮೊನ್ನೆ ಅದೆಲ್ಲೋ ಮೇಳದಲ್ಲಿ ಐನೂರು ಜನ ಹರೋಹರ ಅಂದ್ರಲ್ಲ- ಅವರ ಪಾಪವೇನೋ ಪರಿಹಾರವಾಯ್ತು. ಆದರೆ ಅವರು ಬಿಟ್ಹೋದೋರ ಪಾಪ? ಅವರ Life ಎಲ್ಲಾ Insure ಮಾಡಿದ್ರಲ್ಲಾ ಆ ಕಂಪೆನಿ ಗಳ ಪಾಪ? ಇದೆಲ್ಲಾ ದೇವರ ತಪ್ಪೋ- ಅಥವಾ ಅವನು ನಮಗೊಳ್ಳೇದಾಗ್ಲೀಂತ ನಮಗಿಟ್ಟಿರೋ ಮೆದುಳಿನ ತಪ್ಪೋ?- ಹಾಗೇ ಕೇಳ್ದ ನನ್ನ ಭಾವ. ಹೋಗ್ಲಿ ಬಿಡ್ರೋ — Speaking about God-unsafe! speaking about man-ಇಂಗ್ಲೆಂಡ್ ಅಮೆರಿಕಾಗಳಲ್ಲಿ ಎಷ್ಟು ನಿಯಮ ಕಟ್ಟುನಿಟ್ಟಿನಲ್ಲಿ ಜನರ ನಡತೆ ಇದೆ ಅಂತ? ಅವರಿಗೆ ಆಡಳಿತದಲ್ಲಿ ಕಾನೂನುಗಳಲ್ಲಿ ಇರೋ ಭಕ್ತಿ ನಮ್ಮಲ್ಲಿಲ್ಲ. ಅಂದ್ರೆ ಅಲ್ಲೂನು - ಹವಾಗುಣದಂತೆ - ಆಡಳಿತ ಯಾವತ್ತಿಗೂ ತಪ್ಪೇ. But- ಅವರು Fight ಮಾಡ್ತಾರೆ – Respect ಮಾಡ್ತಾರೆ. ಒಂದು ಚಿಕ್ಕ ವಿಷಯ

ತೆಕೊಳ್ತ್ರೇ– ಅಲ್ಲಿನ ಪಟ್ಟಣಗಳಲ್ಲಿ ಮುಂಜಾನೆ ಹೊತ್ತಿಗೆ ಮನೆಗಳ ಬಾಗಿಲಲ್ಲಿ- ಹಾಲಿನವ ಹಾಲಿನಸೀಸೇನ, ಬ್ರೆಡ್ಡಿನವ ಬ್ರೆಡ್ಡನ್ನ, ಪೇಪರಿನವ ಪೇಪರನ್ನ ಇಟ್ಟು ಹೋಗ್ತಾರಂತೆ. ಮನೆಯಾಕೆ ಎದ್ದಮೇಲೆ ಬಾಗಿಲುತೆಗೆದು ಅವುಗಳನ್ನು ಒಳಕ್ಕೆ ತೆಗೆದುಕೊಂಡು ಹೋಗ್ತಾಳಂತೆ. ವಾರಕ್ಕೋ - ತಿಂಗಳಿಗೋ ಅವರಿಗಲ್ಲಾ ದುಡ್ಡು ಕೊಡೋದನ್ನ - ಒಂದು ಲಕೋಟೇಲಿ ಹಾಕಿ ಅದೇ ಜಾಗದಲ್ಲಿ ಇಟ್ರೆ ಅವರವರು ತೆಗೆದುಕೊಂಡು ಹೋಗ್ತಾರಂತೆ. ಬೇರೆ ಯಾವನೂ ಅದನ್ನು ತಿರುಗಿ ಕೂಡ ನೋಡೊಲ್ಲಂತೆ—"

"ಬೇರೊಬ್ಬರೇನು? - ನಮ್ಮ ಹುಡುಗರೇ ಲಪಟಾಯಿಸ್ತಾರೆ ನಮ್ಮಲ್ಲಿ" ಅಂದೆ.

ರಾಜ ಮುಂದುವರಿದ "ನೋಡೋ ಯುದ್ಧಕಾಲ್ದಲ್ಲಿ ನಮ್ಮ ದೇಶದಲ್ಲಿ Black-Market ಏನ್ಹೋಗಿತ್ತಲ್ಲ? ಈಗಲೂ ತಪ್ಪಿಲ್ಲ ಒಂದು ಬಾಂಬು ಬೀಳಲಿಲ್ಲ - ಒಂದು ಸಾವು ನೋಡಿಲ್ಲ - ಯುದ್ಧದಿಂದ. ಅದೇನೋಡು–Englandನಲ್ಲಿ absolutely no Black-Market! ಕೊಳ್ಳೋರಿದ್ರಲ್ವೆ? ಅಥವಾ ಮಾರೋರಿದ್ರಲ್ವೆ?. ಒಬ್ಬನಿಗೆ ವಾರಕ್ಕೊಂದು ಸಿಗರೇಟ್ ಅಂದ್ರೆ – ಒಂದೇ ಒಂದು. ಎರಡನೇದು ಅವನಿಗೆ ಸಿಗದು! ಸಿಕ್ಕರೂ ಅವ ಅದನ್ನು ಸೇದೋಲ್ಲ! ಅಬ್ಬ ತನ್ನ ತನ್ನ ಜವಾಬ್ದಾರಿ - ತನ್ನ ದೇಶಕ್ಕೆ - ತನ್ನ ಜನಕ್ಕೆ ಅಂದ್ರೆ - ಎಷ್ಟು ಜ್ಞಾನವಯ್ಯಾ? ಅಷ್ಟು ಜ್ಞಾನ, ಆಚರಣೆಯಿಂದ ದೇವರಿಗೆ ತೃಪ್ತಿ ಇಲ್ಲವೇ? ನಾವು ಗೀತೆ ಗೀತೆ ಅಂತ ಆ ಪುಸ್ತಕಕ್ಕೆ ಹಣ್ಣು ಕಾಯಿ ಒಡೆದು ಹೋಳಿಗೆ ಮಾಡಿತಿಂದು, ಗೀತೇ ತಲೆಕೆಳಗಿಟ್ಟು ಮಲಗುತ್ತೇವೆ. ಅದರಲ್ಲಿ ಅಡಕವಾಗಿರೋ ಕರ್ತವ್ಯ ಪಾರಣೇನ ಬೇರೊಬ್ಬರಿಗೆ ಬಿಡುತ್ತೇವೆ. ಅಂಥಾಜನಕ್ಕೆ English ಭಾಷೆ ಬಂಧನದ ಭಾಷೆಯಂತೆ! ಒಂದು ಮಾತಿನಲ್ಲಿ ಹೇಳಬೇಕಾದರೆ - Complete Reformation ಆಗಬೇಕಯ್ಯಾ"

ಅಂತ ಹೇಳಿ ಬೆವರೊರಿಸಿಕೊಂಡ.

"ಅಂದ್ರೆ ನಮ್ಮ Societyನೇ change ಆಗಬೇಕು" ಅಂದ ಚಂದಿ.

"ಅದಕ್ಕೂ ಹೇಳ್ತಾನೆ - ನನ್ನ ಭಾವ" ಅಂದ ರಾಜ.

"ನಾವು ಎಲ್ಲಾ ತೊಡಕುಗಳನ್ನೂ ಒಟ್ಟಿಗೇ ಎದುರಿಸೋಕೆ ಬದಲು ಜನರನ್ನ ಮೊದಲು Prepare ಮಾಡಬೇಕು." ಅಂತ. ನಮ್ಮಲ್ಲಿರೋ ಮೂಢಭಕ್ತಿ ಮೂಢ ಆಚಾರಗಳಿಗೆ ಬದಲಾಗಿ - ಅವುಗಳಲ್ಲಿ ಅಡಕವಾಗಿರೋ - Spirit–ಅಂದರೆ ಆತ್ಮೀಯ (!?) ವನ್ನು ಆಚರಣೇಗೆ ತರಬೇಕು. ನೋಡು 'ರಾಮಪಾದುಕಾ ಪಟ್ಟಾಭಿಷೇಕ' ಹರಿಕಥೇನ ನೂರು ರೂಪಾಯಿ ಖರ್ಚುಮಾಡಿ ಮಾಡಿಸೋದು ಮನಸ್ಸಿನಲ್ಲಿ ಅಣ್ಣ ಸತ್ರೆ ಆಸ್ತೀಯೆಲ್ಲಾ ತನಗೇ ಬರುತ್ತೆ ಅಂತ ಲೆಖ್ಖಹಾಕೋದು!

ಕೃಷ್ಣ ಪರಮಾತ್ಮ ಗೀತೆ ಬೋಧಿಸಿದ ಅಂತ ಸಾವಿರಾರು ರೂಪಾಯಿ ಖರ್ಚುಮಾಡಿ ಪ್ರಚಾರ ಮಾಡೋದು. ಕೃಷ್ಣಾವತಾರ ಅಂತ ಒಂದು ಅಂತಃಪುರವೇ ಕಟ್ಟೋದು! ಯಾಕೆ ಈ ಅನಾಚಾರ? ಪಾಪ ದೇವರ ಹೆಸರು ಕೆಡಸ್ತಾರಲ್ಲಯ್ಯಾ! ಒಬ್ಬ ತನ್ನ ನಾಲ್ಕನೇ ಹೆಂಡತೀನ ಮನೇಲಿ ವದ್ದಿರ್ತಾನೆ - Stage ಮೇಲೆ ರಾಮನ ಪಾರ್ಟ್ಮಾಡ್ತಾನೆ. ಸಾಕ್ಷಾತ್ ರಾಮನೇ ಬಂದ ಅಂತ ಜನರು ನಮಸ್ಕಾರ ಮಾಡ್ತಾರೆ. ಹರಿಶ್ಚಂದ್ರನ ಪಾರ್ಟ್ ಮಾಡಿದೋನು ಕಂಪೆನಿ ಮಾಲೀಕನ ಜೇಬಿನಲ್ಲಿ ದುಡ್ಡು ಕದೀತಾನೆ-ಇವೆಲ್ಲಾ ಹೋಗ್ಬೇಕು ಕಾಣೋ" ಅಂದ.

ಚಂದಿ- "ಲೋ ರಾಜ. ನೀನು ಇನ್ನು ಮೇಲೆ ನಮಗೆ bad company ಕಣೋ. ಊರಿಗೆಹೋಗಿ ರಾಮಮೋಹನರಾಯ್, ಗಾಂಧೀ, ಕೃಪಲಾನಿ ಇವರಿಂದ ತಯಾರಾದ ಉಪ್ಪಿನಕಾಯಾಗಿ ಬಂದಿದ್ದಿ" ಅಂದ.

ನಾನಂದೆ "ಇಲ್ವೋ, ಪಾಪ! ಅವನ ಭಾವ ಇಂಗ್ಲೆಂಡಿಂದ ಬಂದು ಏನೋನೋ ವದರಿದ್ದಾನೆ. ರಾಜ ಅದನ್ನೆಲ್ಲಾ ಕಲಸು ಮೇಲೋಗರಮಾಡಿ ನಮ್ಮ ಮುಂದೆ ವದರಿಡ್ತಾನೆ-ಅಷ್ಟೆ. ಆದರೂ Lot of Sense ಇದೆ-ಹೇಳಿದ್ದರಲ್ಲಿ" ಅಂತ.

ಅದಕ್ಕೆ ಚಂದಿ—"ಅದಿರಲೋ - Public opinion ಅಂದ್ಯಲ್ಲಾ - ಯಾವ Publicಉ?" ಅಂದ.


ರಾಜ ಯೋಚನೆಮಾಡದೆ—"we are the public" ಅಂದ ಗಂಭೀರವಾಗಿ

"who is to bell the cat?" ಅಂತ ಕೇಳಿದೆ.

ಅದಕ್ಕೆ ರಾಜ ಯೋಚನೆ ಮಾಡಿ— "ಒಬ್ಬ ವಿಚಿತ್ರ ಮನುಷ್ಯ ಬೇಕು— ಗಾಂಧೀಜಿ, ಹಿಟ್ಲರ್, ಜಿನ್ನಾ - ಇವರ ಭೂತಗಳು ತಯಾರಿಸಿದ ಒಬ್ಬ ಯುಗ ಪುರುಷ ಬೇಕು" ಅಂದ.

ಅವನನ್ನೇ ಹುಡುಕುತ್ತ ಮುಂದೆ ಹೊರಟೆವು—ಅಯ್ಯೊ?—ಉಳಿದೆವು.

"ಶೇಷ"




ಶೀಘ್ರದಲ್ಲಿಯೇ ಪ್ರದರ್ಶನವನ್ನು ನಿರೀಕ್ಷಿಸಿ

ಎ. ವಿ. ಯಂ. ರವರ

ಪೆಣ್

(ತಮಿಳು)



ಅಂಜಲಿದೇವಿ—ವೈಜಯಂತಿಮಾಲ, ನಾಗಯ್ಯ,
ಬಾಲಚಂದರ್—ಆರ್. ಗಣೇಶ್—ಟಿ. ಎಸ್. ಬಾಲಯ್ಯ,
ಕೆ. ಆರ್. ರಾಮಸ್ವಾಮಿ ಅಭಿನಯ

ನಿರ್ದೇಶನ
ಎಂ. ವಿ. ರಾಮನ್

★

ಸ್ಟುಡಿಯೋ
ಎ. ವಿ. ಯಂ.

A TALLAM RELEASE

Koravanji, April 1954

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ನಮ್ಮ ನೂತನ ಏಜೆಂಟರುಗಳು :

೧. ಶ್ರೀ॥ ವೆಂಕಟರಾಮಯ್ಯ, ತರೀಕೆರೆ.


೨. ,, ಸಜ್ಜರಾಯ ಶೆಟ್ಟಿ, ಮಧುಗಿರಿ.

೩. ,, ಎ. ರಾಜಗೋಪಾಲಾಚಾರ್, ನಾಗಮಂಗಲ.

೪. ,, ಜಿ. ಎ. ರಂಗರಾಜ್, ಗೋರೂರ್.

೫. ,, ಪ್ರಕಾಶ್ ನ್ಯೂಸ್ ಏಜೆನ್ಸಿ, ಚಾಮರಾಜನಗರ.

೬. ,, ಹೆಚ್. ಎ. ರಾಧಾಕೃಷ್ಣ ಶೆಟ್ಟಿ, ಕಡೂರು.



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

★ ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ. ★

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ — — — ಬೆಂಗಳೂರು 3.

REG. No. M. 4718 KORAVANJI, APRIL 1954

Printed by B. S. Iyengar, Bangalore City

Publisher—B. N. Gupta. Editor—M Sivaram